ಬೆಲೆ ರೂ.2.50 WPP No. SK/MNG/WPP/69
D.O.P - 15th of every month from Udupi Sorting Office

**Smt. Nagaveni Ullas**
Proprietor
Mobile : 9741626190
E-mail : rao.ullas@yahoo.co.in

**RAMDEV ENTERPRISES**
"Ramdev", Opp. Balaganapathi Temple, Padubidri-574111, Udupi Dist.

Authorised Distributor For :
1. KEYA-Amalgam Speciality Foods (I) Pvt. Ltd.
2. Swastiks-Vishnu Masala Food Pvt. Ltd.
3. Agarbathi, Loban & Camphor-Stockists

# ಶ್ರೀ ಶಾರದಾ

ಮಾಸಪತ್ರಿಕೆ - 15 ಮಾರ್ಚ್ 2013

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ - 576 102. ☎ 2520754

ಸಂಪುಟ-13 ಸಂಚಿಕೆ-3 ಪುಟಗಳು-8 Registered Under No.J/UDP/1260/2012-2014 Dated from 01-01-2012 to 31-12-2014.

## ಶ್ರೀ ಸ್ಥಾನಿಕ ಬ್ರಾಹ್ಮಣ ಮಹಾಮಂಡಲಕ್ಕೆ ನೂತನ ಆಡಳಿತ ಮಂಡಳಿಯ ಆಯ್ಕೆ

ಪ್ರಪಂಚದಾದ್ಯಂತ ಇರುವ ಸ್ಥಾನಿಕ ಬ್ರಾಹ್ಮಣರ ಸಂಘ ಸಂಸ್ಥೆಗಳು ಹಾಗೂ ನಮ್ಮ ಸಮಾಜದ ಸಂಪನ್ಮೂಲ ವ್ಯಕ್ತಿಗಳ ಒಕ್ಕೂಟವಾದ ಶ್ರೀ ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ಮಹಾಸಭೆಯು ದಿನಾಂಕ 24-02-2013 ರಂದು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸದನದಲ್ಲಿ ಜರುಗಿತು. ಮಹಾಮಂಡಲದ ಸದಸ್ಯ ಸಂಘಗಳಾದ ಕುಂದಾಪುರ, ಉಡುಪಿ, ಪಡುಬಿದ್ರೆ, ಮಂಗಳೂರು, ಪುತ್ತೂರು, ಕಡಬ, ಕಾಸರಗೋಡು ಮತ್ತು ಮೈಸೂರಿನ ಸಂಘಗಳ ಪ್ರತಿನಿಧಿಗಳು ಹಾಗೂ ಈ ಮಹಾಮಂಡಲದ ಐದು ಜನ ಖಾಯಂ ಸದಸ್ಯರೂ ಸಭೆಯಲ್ಲಿ ಭಾಗವಹಿಸಿದ್ದರು. ಅವರೊಂದಿಗೆ ಸದಸ್ಯರಾಗ ಬಯಸುತ್ತಿರುವ ವಿಟ್ಲ ಹಾಗೂ ಬಂಟ್ವಾಳ ಸಂಘಗಳ ಪ್ರತಿನಿಧಿಗಳು ಈ ಸಭೆಯಲ್ಲಿ ಭಾಗವಹಿಸಿದ್ದರು. ಈ ಸಂಘಗಳೂ ಮಹಾ ಮಂಡಲದ ಸದಸ್ಯತನವನ್ನು ಪಡೆದಿರುತ್ತವೆ.

ಶ್ರೀ ಕಡಬ ಗೋಪಾಲ ರಾಯರ ಪ್ರಾರ್ಥನೆಯೊಂದಿಗೆ ಆರಂಭವಾದ ಸಭೆಗೆ ಮಹಾಮಂಡಲದ ಸ್ಥಾಪಕ ಅಧ್ಯಕ್ಷರಾದ ಶ್ರೀ ಸಿ. ಎಸ್. ರಾಯರು ಸದಸ್ಯರೆಲ್ಲರನ್ನು ಸ್ವಾಗತಿಸಿ ತಾನು ಕಳೆದ ಆರು ತಿಂಗಳುಗಳಿಂದ ಮಹಾಮಂಡಲದ ಸದಸ್ಯತನಕ್ಕಾಗಿ ಓಡಾಡಿದ ಸಂದರ್ಭದಲ್ಲಿ ಭೇಟಿ ಮಾಡಿದ್ದ ಗಣ್ಯರು ಮಹಾಮಂಡಲ ಹೇಗಿರಬೇಕು ಹಾಗೂ ಹೇಗೆ ಕಾರ್ಯನಿರ್ವಹಿಸಬೇಕು ಎಂಬುದರ ಬಗ್ಗೆ ವ್ಯಕ್ತಪಡಿಸಿದ್ದ ಅಭಿಪ್ರಾಯಗಳನ್ನು ಸಭೆಗೆ ತಿಳಿಸಿದರು. ನಂತರ ಕಾರ್ಯದರ್ಶಿಗಳಾದ ಶ್ರೀ ಎನ್. ಕೆ. ಜಗನ್ನಿವಾಸ ರಾಯರು ಓದಿ ಹೇಳಿದ ಮಹಾಸಭೆಯ ನೋಟಿಸನ್ನು ಸಭೆಯು ಅಂಗೀಕರಿಸಿದ ಮೇಲೆ ಡಾ। ವೈ.ಸುದರ್ಶನ ರಾಯರು ಮಹಾಮಂಡಲದ ಉದ್ದೇಶಗಳು ಹಾಗೂ ಬೈಲಾವನ್ನು ಓದಿ ವಿವರಿಸಿದರು. ಅದರೊಂದಿಗೆ ಬೆಂಗಳೂರು ಸಂಘದಿಂದ ಬಂದಿದ್ದ ಪತ್ರವನ್ನೂ ಓದಿ ಹೇಳಿದರು. ಸಭೆಯಲ್ಲಿ ಈ ಮೂರು ವಿಷಯಗಳ ಬಗ್ಗೆ ವಿವರವಾದ ಚರ್ಚೆಗಳು ನಡೆದ ನಂತರ ಮುಂದಿನ ಮೂರು ವರ್ಷಗಳಿಗಾಗಿ ನೂತನ ಆಡಳಿತ ಮಂಡಳಿಯ ಆಯ್ಕೆ ನಡೆಯಿತು.

ಪ್ರತಿ ಸದಸ್ಯ ಸಂಘಗಳಿಂದ ಒಬ್ಬರಂತೆ ಹಾಗೂ ಸದ್ಯ ಸದಸ್ಯರಾಗಿರುವ ಎಲ್ಲಾ ಖಾಯಂ ಸದಸ್ಯರನ್ನು ಆಡಳಿತ ಮಂಡಳಿಯ ಸದಸ್ಯರನ್ನಾಗಿ ಆಯ್ಕೆ ಮಾಡಿಕೊಳ್ಳಲಾಯಿತು. ಈ ಸದಸ್ಯರೊಳಗೆ ಶ್ರೀ ಎಂ .ಆರ್. ವಾಸುದೇವ ಇವರು ಅಧ್ಯಕ್ಷರಾಗಿಯೂ, ಶ್ರೀ ಉಮೇಶ್ ಶಾನುಭೋಗ್, ಕಿರಿಮಂಜೇಶ್ವರ ಇವರು ಉಪಾಧ್ಯಕ್ಷರಾಗಿಯೂ, ಶ್ರೀ ಎನ್. ಕೆ ಜಗನ್ನಿವಾಸ ರಾಯರು ಕಾರ್ಯದರ್ಶಿ ಹಾಗೂ ಡಾ। ವೈ. ಸುದರ್ಶನ್ ರಾವ್ ಜೊತೆ ಕಾರ್ಯದರ್ಶಿಗಳಾಗಿಯೂ ಹಾಗೂ ಕೋಲ್ಪೆ ಗೋಪಾಲರಾವ್, ಕಡಬ ಇವರು ಖಜಾಂಚಿ ಯಾಗಿಯೂ ಅವಿರೋಧವಾಗಿ ಆಯ್ಕೆ ಯಾದರು. ಕುಂದಾಪುರ ಸಂಘದ ಪರವಾಗಿ ಶ್ರೀ ಗಣೇಶ್ ರಾವ್, ಉಡುಪಿಯ ಪರವಾಗಿ ಶ್ರೀ ಪ್ರಫುಲ್ಲಚಂದ್ರ ರಾವ್, ಪಡುಬಿದ್ರೆಯಿಂದ ಶ್ರೀ ಎಂ. ಕೆ. ದಿವಾಕರ ರಾವ್, ಮೈಸೂರಿನಿಂದ ಶ್ರೀ ಆನಂದ ರಾವ್ ಹಾಗೂ ಕಾಸರಗೋಡಿನಿಂದ ಶ್ರೀ ಮುರಲೀಧರರಾವ್ ಹಾಗೂ ಖಾಯಂ ಸದಸ್ಯರಾದ ಶ್ರೀ ಸಿ. ಎಸ್. ರಾವ್ ಇವರು ಆಡಳಿತ ಮಂಡಳಿಯ ಸದಸ್ಯರಾಗಿ ಆಯ್ಕೆಯಾದರು. ಮೈಸೂರಿನ ಶ್ರೀ ಕೃಷ್ಣ ರಾಯರು ಈ ಅಯ್ಕೆಯನ್ನು ಸುಲಲಿತವಾಗಿ ನಡೆಸಿಕೊಟ್ಟರು.

ನೂತನ ಅಧ್ಯಕ್ಷರು ಹೊಸದಾಗಿ ರಚನೆಯಾಗಿರುವ ಈ ಮಹಾಮಂಡಲವು ಎಲ್ಲರ ವಿಶ್ವಾಸಕ್ಕೆ ಪೂರಕವಾಗಿ ಮುಂದುವರಿಯುವ ಆಶಯವನ್ನು ವ್ಯಕ್ತಪಡಿಸಿದರು. ಕೊನೆಯಲ್ಲಿ ಡಾ। ವೈ.ಸುದರ್ಶನ ರಾಯರು ಧನ್ಯವಾದ ವಿತ್ತರು. ನಮ್ಮ ಸಮಾಜದ ಎಲ್ಲಾ ಸಂಘಗಳು, ಹಾಗೂ ಸಂಪನ್ಮೂಲ ವ್ಯಕ್ತಿಗಳು ಈ ಮಹಾಮಂಡಲದ ಸದಸ್ಯರಾಗಿ ಒಕ್ಕೂಟವನ್ನು ಬಲಪಡಿಸುವಂತೆ ಆಡಳಿತ ಮಂಡಳಿಯ ಪರವಾಗಿ ನಮ್ಮ ಸಮಾಜ ಬಾಂಧವರಲ್ಲಿ ವಿನಂತಿ. ನಮ್ಮ ಸಂಪರ್ಕ ಸಂಖ್ಯೆಗಳು - ಕಾರ್ಯದರ್ಶಿ ಶ್ರೀ ಎನ್.ಕೆ ಜಗನ್ನಿವಾಸ ರಾವ್ 9448260888 ಹಾಗೂ ಜೊತೆ ಕಾರ್ಯದರ್ಶಿ ಡಾ. ವೈ ಸುದರ್ಶನರಾವ್ 9845136322.



**ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ)**
ಕುಂಜಿಬೆಟ್ಟು, ಉಡುಪಿ - 2.
ನಮ್ಮ ಸಂಘದ ಆಶ್ರಯದಲ್ಲಿ ಶ್ರೀ ಶಂಕರ ಜಯಂತಿ ಪ್ರಯುಕ್ತ
ತಾ.15-05-2013 ಬುಧವಾರ
**ಸಾಮೂಹಿಕ ಉಪನಯನ**
ನೆರವೇರಲಿದೆ ಹಾಗೂ ಶ್ರೀಶಾರದಾ ಮಂದಿರದಲ್ಲಿ ವಿಶೇಷ ಪೂಜೆಯೂ ಜರಗಲಿದೆ.
ಸರ್ವರಿಗೂ ಆದರದ ಸ್ವಾಗತ :
- ಕಾರ್ಯದರ್ಶಿ

ಸಾಮೂಹಿಕ ಉಪನಯನದಲ್ಲಿ ಪಾಲ್ಗೊಳ್ಳಲಿರುವ ಆಸಕ್ತ ಸಮಾಜ ಬಾಂಧವರು ವಟುಗಳ ವಿವರಗಳನ್ನು ತಾ.30-04-2013ರ ಒಳಗೆ ಶ್ರೀಶಾರದಾ ಮಂಟಪದ ಮೆನೇಜರ್/ಕಾರ್ಯದರ್ಶಿಯವರಿಗೆ ತಿಳಿಸಲು ವಿನಂತಿಸಲಾಗಿದೆ.


## ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ದೇವಸ್ಥಾನದಲ್ಲಿ ಸಂಭ್ರಮದ ಮಹಾಶಿವರಾತ್ರಿ ಆಚರಣೆ



ಶಿವರಾತ್ರಿಯ ಪರ್ವಕಾಲದಲ್ಲಿ ಶಿವನ ಆರಾಧನೆ, ಶಿವಲಿಂಗ ಪೂಜೆ, ಶಿವರಾತ್ರಿ ಜಾಗರಣೆಯಿಂದ ಪರಮೇಶ್ವರನು ಸಂತೃಪ್ತನಾಗಿ ಸರ್ವರಿಗೂ ಸುಖ-ಶಾಂತಿ, ನೆಮ್ಮದಿ ಕರುಣಿಸುವನು ಎಂಬುದಾಗಿ ಪ್ರತೀತಿ ಇದೆ. ಅದರಂತೆ ಪ್ರತೀ ವರ್ಷವೂ ಶಿವಭಕ್ತರಾದ ನಾವು ಶಿವರಾತ್ರಿಯಂದು ರುದ್ರಪಠಣ, ರುದ್ರಾಭಿಷೇಕ, ಭಜನೆ ಹಾಗೂ ವಿಶೇಷ ಪೂಜೆಯನ್ನು ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ) ಕುಂಜಿಬೆಟ್ಟು ಇದರ ವತಿಯಿಂದ ನಡೆಸಿಕೊಂಡು ಬರುತ್ತಿದ್ದೇವೆ.

ತಾ 10-03-2013ನೇ ಆದಿತ್ಯವಾರ ಉಡುಪಿ ಕುಂಜಿಬೆಟ್ಟಿನ ಶಾರದಾ ದೇವಸ್ಥಾನದಲ್ಲಿ ಸಮಾಜ ಬಾಂಧವರ ಸಹಕಾರದಿಂದ ಶಿವರಾತ್ರಿ ಉತ್ಸವವು ಪ್ರಾರಂಭಗೊಂಡಿತು. ಮಹಾ ಶಿವರಾತ್ರಿ ಪ್ರಯುಕ್ತ ಬ್ರಹ್ಮಶ್ರೀ ಪಾವಂಜೆ ವಾಸುದೇವ ಉಪಾಧ್ಯಾಯರ ನೇತೃತ್ವದಲ್ಲಿ ಬೆಳಿಗ್ಗೆಯಿಂದ ರುದ್ರಾಭಿಷೇಕ, ಪಾರಾಯಣ, ಆರಾಧನೆ ಮಹಿಳಾ ವೇದಿಕೆಯವರಿಂದ ಶಿವ ಸ್ತೋತ್ರ ಪಠಣ, ಶಿವಸಹಸ್ರನಾಮಾವಳಿ ಹಾಗೂ ಸ್ವಾಧ್ಯಾಯ ಸಮಿತಿಯವರಿಂದ ರುದ್ರ ಪಠಣ ಜರುಗಿತು. ಮಧ್ಯಾಹ್ನ 12 ಗಂಟೆಗೆ ಬ್ರಹ್ಮಶ್ರೀ ವಾಸುದೇವ ಉಪಾಧ್ಯಾಯರು ದೇವಸ್ಥಾನದ ಅರ್ಚಕರ ಸಹಕಾರದಿಂದ ಮಹಾಪೂಜೆಯನ್ನು ನೆರವೇರಿಸಿದರು. ಸಂಘದ ಪದಾಧಿಕಾರಿಗಳು, ಸದಸ್ಯರು, ಸಮಾಜ ಬಾಂಧವರು ಅಲ್ಲದೆ ಸುತ್ತಲಿನ ಭಕ್ತಜನರು ಈ ವಿಶೇಷ ಪೂಜೆಯಲ್ಲಿ ಪಾಲ್ಗೊಂಡು ಪ್ರಸಾದ ಸ್ವೀಕರಿಸಿದರು. ಅದೇ ದಿನ ಸಂಜೆ 6-30 ರಿಂದ ಸಂಘದ ವತಿಯಿಂದ ಹಾಗೂ ಕಲೆ ಮತ್ತು ಸಂಸ್ಕೃತಿ ವೇದಿಕೆಯವರ ಸಹಕಾರದೊಂದಿಗೆ ಉಡುಪಿಯ ಸೃಷ್ಟಿ ನೃತ್ಯ ಕಲಾಕುಟೀರ (ರಿ.) ಇದರ ಕಲಾವಿದರಿಂದ ಶಿವ ನೃತ್ಯ ವೈಭವ ಸಾಂಸ್ಕೃತಿಕ ಕಾರ್ಯಕ್ರಮ ಜರಗಿತು. ಕೊನೆಯಲ್ಲಿ

(8ನೇ ಪುಟಕ್ಕೆ....)



**ಶ್ರೀಶಾರದಾ ದೇವಸ್ಥಾನ**
ಶಾರದಾ ನಗರ, ಕುಂಜಿಬೆಟ್ಟು, ಉಡುಪಿ - 2. ಫೋನ್ : 2520754

ಪ್ರಿಯರೇ,
ಸ್ವಸ್ತಿ ಶ್ರೀ ಚಾಂದ್ರ ವಿಜಯ ನಾಮ ಸಂ।ರದ ಮೀನ ಮಾಸ ಚೈತ್ರ ಕೃಷ್ಣ ಪಕ್ಷ
ತಾ.19-04-2013ನೇ ಶುಕ್ರವಾರ ಸಂಜೆ ಗಂಟೆ 5-00ರಿಂದ
**ಪ್ರತಿವರ್ಷದಂತೆ ಪರಿಸರದ ಭಕ್ತ ಬಾಂಧವರು ಭಕ್ತಿ-ಪ್ರೀತಿಯಿಂದ ಪೂಜಿಸಿಕೊಂಡು ಬರುತ್ತಿರುವ ಶ್ರೀಶಾರದಾ ಪರಮೇಶ್ವರೀ ಸನ್ನಿಧಿಯಲ್ಲಿ**
**ಸಾಮೂಹಿಕ ಶ್ರೀದುರ್ಗಾ ನಮಸ್ಕಾರ ಪೂಜೆಯು**
ನೆರವೇರಲಿದೆ. ಪಾಲ್ಗೊಳ್ಳಲಿರುವ ಭಕ್ತಾದಿಗಳು ಸೇವಾ ರೂಪದಲ್ಲಿ ರೂ.125/-ನ್ನು ನೀಡಿ ಆದಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.
ದುರ್ಗಾಮಾತೆಗೆ ಅರ್ಪಿಸಲು ಹಣ್ಣು, ಹೂವು ಇತ್ಯಾದಿಗಳನ್ನು ಪೂಜಾರಂಭಕ್ಕೆ ಮೊದಲು ತಂದು ನೀಡಬಹುದು. ಅಪರಾಹ್ನ 3ರಿಂದ ದೀಪವಿಟ್ಟು ಮಂಡಲ ರಚನೆ, ಸಂಜೆ 5 ರಿಂದ ಸೇವಾ ಕರ್ತೃಗಳಿಂದ ಪೂಜಾ ಸಂಕಲ್ಪ, ಭಕ್ತರು ಹಾಗೂ ಋತ್ವಿಜರಿಂದ ಸಪ್ತಶತಿ ಪಾರಾಯಣ, ಸಹಸ್ರನಾಮ ಪಾರಾಯಣ, ಅಷ್ಟೋತ್ತರ ಕುಂಕುಮಾರ್ಚನೆ, ಪುಷ್ಪಾಂಜಲಿ ನಮಸ್ಕಾರ, ಮಹಾಪೂಜೆ, ತೀರ್ಥಪ್ರಸಾದ ವಿತರಣೆ, ಭೋಜನ ಪ್ರಸಾದ. - **ಆಡಳಿತ ಮಂಡಳಿ**

**ಸಂಪಾದಕ ಮಂಡಳಿ**

ಕೃಷ್ಣಕುಮಾರ್ ರಾವ್, ಮಟ್ಟು
ಕೆ. ವೇಣುಗೋಪಾಲ್ ರಾವ್
ಡಾ। ವೈ. ಸುದರ್ಶನ ರಾವ್
ಟಿ. ಸುರೇಶ್ ರಾವ್, ನಿಟ್ಟೂರು
ಟಿ. ವಿಶ್ವನಾಥ ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ, ಮಣಿಪಾಲ



ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

-ಸಂಪಾದಕ ಮಂಡಳಿ


## ಚಿಂತನ

ಭಯೋತ್ಪಾದನೆ ಈ ಶಬ್ಧವು ಎಲ್ಲರಿಗೂ ಇಂದಿನ ಕಾಲದಲ್ಲಿ ಚಿರಪರಿಚಿತ. ಇತ್ತೀಚೆಗೆ ಹೈದರಾಬಾದ್‌ನಲ್ಲಿ ನಡೆದ ಬಾಂಬ್ ಸ್ಫೋಟದ ಪರಿಣಾಮದ ಬಗ್ಗೆ ಯೋಚಿಸುವಾಗ ಬಹಳಷ್ಟು ಭಯಪಡುವಂತಾಗಿದೆ.


ಆದರೆ ಈ ಬಗ್ಗೆ ನಮ್ಮ ಘನ ಸರಕಾರದ ಮಂತ್ರಿಗಳ ಮಾತುಗಳು ಎಷ್ಟೊಂದು ಹಗುರ ಹಾಗೂ ಹಾಸ್ಯಾಸ್ಪದವೆನಿಸಿದೆಯಲ್ಲವೇ? ಕೇಂದ್ರ ಗೃಹ ಮಂತ್ರಿಗಳು ಹೈದರಾಬಾದ್ ಬಾಂಬ್ ಸ್ಫೋಟದ ನಂತರ ಸಂಬಂಧಪಟ್ಟ ರಾಜ್ಯಕ್ಕೆ ನಾವು ಬಾಂಬ್ ಸ್ಫೋಟದ ಬಗ್ಗೆ ಜಾಗೃತಿ ಹಾಗೂ ಸೂಚನೆಯನ್ನು ಸಾಕಷ್ಟು ಮೊದಲೇ ನೀಡಿದ್ದೇವೆಂದು "ಜವಾಬ್ದಾರಿಯುತ" ಹೇಳಿಕೆ ನೀಡಿದರು. ಅದಕ್ಕೆ ಉತ್ತರವಾಗಿ ಆ ರಾಜ್ಯದ ಮಂತ್ರಿಗಳು, ಅಧಿಕಾರಿಗಳು ನೀಡಿದ ಉತ್ತರ ಹೇಗಿದೆ?...ನೋಡಿ- ಕೇಂದ್ರವು ಭಯೋತ್ಪಾದನೆಯ ಬಗ್ಗೆ ಆಗಾಗ ನೀಡುವ ಮಾಮೂಲು ಎಚ್ಚರಿಕೆಯಂತೆಯೇ ಇತ್ತು ವಿನಹ ಅದರ ಗಂಭೀರತೆಯ ಬಗ್ಗೆ ನಮಗೆ ತಿಳಿಸಿಲ್ಲ!

ಒಟ್ಟಿನಲ್ಲಿ ಇವರೆಲ್ಲರ ವರ್ತನೆ, ಹೇಳಿಕೆಗಳಿಂದಲೇ ಅಮಾಯಕರಾದ ನಾಗರಿಕರನೇಕರ ಸಾವು, ಗಾಯಾಳುಗಳು, ಅಂಗ ವೈಕಲ್ಯತೆ ಹಾಗೂ ಅಪಾರ ಸೊತ್ತುಗಳ ನಾಶ, ಕಷ್ಟ-ನಷ್ಟಕ್ಕೆ ಕಾರಣವಾಗಿದೆ ಎಂದರೆ ತಪ್ಪಲ್ಲ.

ಸಿ.ಬಿ.ಐ.ಅಧಿಕಾರಿಗಳಿರಲಿ, ಅಥವಾ ಭಯೋತ್ಪಾದನಾ ನಿಗ್ರಹ ದಳದವರಿರಲಿ, ಇನ್ನಾವುದೇ ಅನ್ವೇಷಣಾ ಸಂಸ್ಥೆಗಳಿರಲಿ ರಾಜ್ಯದ -ದೇಶದ ಮಂತ್ರಿಗಳಿರಲಿ, ಅಧಿಕಾರಿಗಳಿರಲಿ ತಮ್ಮ ಪಾಲಿನ ಕರ್ತವ್ಯವನ್ನು ಚೆನ್ನಾಗಿ ನಿರ್ವಹಿಸಿದ್ದೇ ಆದರೆ ಈ ರೀತಿಯ ಅನಾಹುತ ನಡೆಯಲು ಸಾಧ್ಯವೇ? ಸ್ಫೋಟ ನಡೆಯಬಹುದು ಎನ್ನುವ ಸ್ಪಷ್ಟ ಸೂಚನೆ ಸಿಕ್ಕಿದ ಮೇಲೆಯೂ ಅದನ್ನು ತಡೆಯುವ ಸಲುವಾಗಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಿಲ್ಲವೇಕೆ? ಸಿ.ಸಿ. ಕೆಮರಾಗಳ ಸಂಪರ್ಕ ಕಡಿತವಾಗಿದೆ ಎಂದು ಒಂದು ಹೇಳಿಕೆ ಇಲ್ಲ; ಅಸ್ಪಷ್ಟ ಚಿತ್ರಗಳು ಗೋಚರವಾಗಿವೆ ಎಂದು ಇನ್ನೊಂದು ಹೇಳಿಕೆ ಇವೆಲ್ಲಾ ಎಷ್ಟೊಂದು ಹಾಸ್ಯಾಸ್ಪದವಾಗಿವೆ! ಆ ಮೂಲಕ ಜನರನ್ನು ದಾರಿ ತಪ್ಪಿಸುವ ಹೇಳಿಕೆಗಳೆನ್ನಬೇಕೇ? ಇದೆಂತಹಾ ವ್ಯವಸ್ಥೆ?

# ಶ್ರೀ ಕೃಷ್ಣಾಯನ

## (ಶ್ರೀ ಮದ್ಭಾಗವತಾನುಸಾರಿ)



- ಕೆ. ಆತ್ಮಾರಾಮ ಶಾಸ್ತ್ರೀ
ಬೆಂಗಳೂರು

(ಹಿಂದಿನ ಸಂಚಿಕೆಯಿಂದ...)

ದ್ರೌಪದಿಯು ರುಕ್ಮಿಣಿ ಮೊದಲಾದ ಕೃಷ್ಣ ಮಹಿಷಿಯರನ್ನು ಮಾತಾಡಿಸುತ್ತಾ ಅವರ ವಿವಾಹ ವೃತ್ತಾಂತವನ್ನೂ, ಕೃಷ್ಣನೊಡನೆ ಅವರ ಗೃಹಸ್ಥ ಜೀವನವನ್ನೂ ವಿಚಾರಿಸಿ ತಿಳಿದುಕೊಂಡು ಕೃಷ್ಣನ ಮಹಿಮೆಗೆ ಬೆರಗಾದಳು. ಕುಂತಿ, ಗಾಂಧಾರಿ, ಸುಭದ್ರೆಯರೂ ಶ್ರೀಕೃಷ್ಣನ ಅದ್ಭುತ ಲೀಲೆಗಳನ್ನು ಅವನ ಪತ್ನಿಯರಿಂದಲೂ, ಗೋಪಿಕೆಯರಿಂದಲೂ ಕೇಳಿ ವಿಸ್ಮಯಗೊಂಡರು. ಹೀಗೆ ಅವರೆಲ್ಲರೂ ಸುಖ ಸಂಕಥಾ ವಿನೋದಗಳಿಂದ ಕಾಲ ಕಳೆಯುತ್ತಿರುವಾಗ ಅಲ್ಲಿಗೆ ಋಷಿಮುನಿಗಳು ರಾಮ, ಕೃಷ್ಣರ ದರ್ಶನಾಕಾಂಕ್ಷಿಗಳಾಗಿ ಬಂದರು. ಹಾಗೆ ಬಂದವರಲ್ಲಿ ಪ್ರಮುಖರೆಂದರೆ ವೇದವ್ಯಾಸ, ನಾರದ, ಚ್ಯವನ, ದೇವಲ, ಅಸಿಕ, ವಿಶ್ವಾಮಿತ್ರ, ಶತಾನಂದ, ಭರದ್ವಾಜ, ಗೌತಮ, ಪರಶುರಾಮ, ವಸಿಷ್ಠ, ಗಾಲವ, ಭೃಗು, ಪುಲಸ್ತ್ಯ ಕಶ್ಯಪ, ಅತ್ರಿ, ಮಾರ್ಕಂಡೇಯ, ಬೃಹಸ್ಪತಿ, ದ್ವಿತ, ತ್ರಿತ, ಏಕತ, ಬ್ರಹ್ಮ ಪುತ್ರರು (ಸನಕಾದಿಗಳು), ಅಗಸ್ತ್ಯ, ಯಾಜ್ಞವಲ್ಕ್ಯ, ವಾಮದೇವ ಮುಂತಾದವರು. ಆ ವಿಶ್ವವಂದ್ಯರನ್ನು ನೋಡುತ್ತಲೇ ಅಲ್ಲಿ ಕುಳಿತಿದ್ದ ರಾಜರು, ಪಾಂಡವರು, ರಾಮ, ಕೃಷ್ಣರು ಎದ್ದು ನಿಂತು ವಂದಿಸಿದರು. ಬಳಿಕ ಅವರೆಲ್ಲರನ್ನೂ ಅರ್ಘ್ಯ ಪಾದ್ಯಾದಿಗಳಿಂದ ಪೂಜಿಸಿದರು. ಅನಂತರ ಭಗವಾನ್ ಶ್ರೀಕೃಷ್ಣನು ಅವರನ್ನುದ್ದೇಶಿಸಿ ಹೀಗೆಂದನು, ''ಮಹಾತ್ಮರೇ, ದೇವತೆಗಳಿಗೂ ದುರ್ಲಭವಾದ ನಿಮ್ಮ ದರ್ಶನವು ನಮಗೆ ಅನಾಯಾಸವಾಗಿ ದೊರಕಿತು. ನಮ್ಮ ಜನ್ಮವು ಸಾರ್ಥಕವಾಯಿತು. ಸ್ವಲ್ಪವೇ ಪುಣ್ಯ ಮಾಡಿದವರು ವಿಗ್ರಹಗಳಲ್ಲಷ್ಟೆ ದೇವರನ್ನು ಕಂಡು ದರ್ಶನ, ಸ್ಪರ್ಶನ, ನಮನ, ಅರ್ಚನಾದಿಗಳನ್ನು ಮಾಡುತ್ತಾರೆ. ನೀರಿನ ತೀರ್ಥಗಳು ತೀರ್ಥಗಳಲ್ಲ. ಮಣ್ಣಿನ, ಕಲ್ಲಿನ ವಿಗ್ರಹಗಳು ದೇವತೆಗಳಲ್ಲ. ಆದರೆ ಅವುಗಳನ್ನು ಬಹಳ ಕಾಲ ಸೇವಿದರೆ ಮಾತ್ರ ಅವುಗಳಿಗೆ ಪಾವನಗೊಳಿಸುವ ಶಕ್ತಿ ಬರುತ್ತದೆ. ಅಗ್ನಿ, ಸೂರ್ಯ, ಚಂದ್ರ, ನಕ್ಷತ್ರಗಳು, ಭೂಮಿ, ನೀರು, ಆಕಾಶ, ವಾಯು, ವಾಕ್ಕು, ಮನಸ್ಸು-ಇವುಗಳನ್ನು ಪೂಜಿಸಿದರೆ ಪಾಪ ಪರಿಹಾರವಾಗುವುದಿಲ್ಲ. ಯಾಕೆಂದರೆ ಅದರಿಂದ ಭೇದಬುದ್ಧಿಯು ನಾಶವಾಗುವುದಿಲ್ಲ. ಆದರೆ ನಿಮ್ಮಂತಹ ಬ್ರಹ್ಮಜ್ಞಾನಿಗಳನ್ನು ಒಂದು ಕ್ಷಣ ಆರಾಧಿಸಿದರೂ ಎಲ್ಲ ಪಾಪಗಳು ನಾಶವಾಗುತ್ತವೆ. ಯಾಕೆಂದರೆ ನಿಮ್ಮ ದರ್ಶನ ಮಾತ್ರದಿಂದ ಭೇದಬುದ್ಧಿ ಅಳಿಯುತ್ತದೆ''.

ಜಗದ್ಗುರು ಶ್ರೀಕೃಷ್ಣನ ಇಂತಹ ಮಾತುಗಳನ್ನು ಕೇಳಿ ಆ ಮುನಿಗಳಿಗೆ ಅವನ ಅಭಿಪ್ರಾಯವೇನೆಂದು ಅರ್ಥವಾಗಲಿಲ್ಲ. ಅದಕ್ಕೇ ಕ್ಷಣ ಕಾಲ ಮೌನವಾಗಿ ಕುಳಿತರು. ಅನಂತರ ಇದೆಲ್ಲ ಆ ಪರಮಾತ್ಮನ ಲೋಕ ಸಂಗ್ರಹ ಲೀಲೆಗಳೆಂದು ಭಾವಿಸಿ, ಮುಗುಳುನಕ್ಕು ಅವನನ್ನು ಬಗೆ ಬಗೆಯಾಗಿ ವರ್ಣಿಸಿ, ಸ್ತುತಿಸಿದರು. ಭಗವಂತನ ಲೀಲಾ ಮಾನುಷ ರೂಪವನ್ನು ನೋಡಲೆಂದು ಬಂದ ಋಷಿಮುನಿಗಳು ಅವನ



ಮತ್ತು ಅಲ್ಲಿದ್ದ ವಸುದೇವ, ಧೃತರಾಷ್ಟ್ರಾದಿಗಳ ಅನುಮತಿ ಪಡೆದು ತಂತಮ್ಮ ಆಶ್ರಮಗಳಿಗೆ ತೆರಳಲು ಸಿದ್ಧರಾದರು. ಆಗ ವಸುದೇವನು ಅವರಿಗೆ ಅಭಿವಾದನೆ ಮಾಡಿ ಹೀಗೆ ನುಡಿದನು, ''ಋಷಿವರ್ಯರೇ, ನಿಮಗೆ ವಂದನೆಗಳು. ನನ್ನದೊಂದು ಬಿನ್ನಹವಿದೆ. ಕೃಪೆಮಾಡಿ ಕೇಳಿಸಿಕೊಳ್ಳಬೇಕು. ಯಾವ ಕರ್ಮಾನುಷ್ಠಾನದಿಂದ ಕರ್ಮಬಂಧನದಿಂದ ಪಾರಾಗಬಹುದೋ ಅದನ್ನು ನನಗೆ ತಿಳಿ ಹೇಳಿರಿ''

ಆಗ ನಾರದರೆಂದರು, ''ಮುನಿಸತ್ತಮರೇ, ವಸುದೇವನು ಜಗದೀಶ್ವರನನ್ನು ತನ್ನ ಮಗನೆಂದು ಭ್ರಮಿಸಿರುವುದರಿಂದ ತನ್ನ ಶ್ರೇಯಸ್ಸಿಗೆ ಉಪಾಯವನ್ನು ತಿಳಿದುಕೊಳ್ಳಲು ಬಯಸಿದ್ದಾನೆ. ಹತ್ತಿರದಲ್ಲೇ ಇರುವ ವಸ್ತುವಿನ ಅತಿಪರಿಚಯದಿಂದ ಜನರು ಅದನ್ನು ಕಡೆಗಣಿಸುತ್ತಾರೆ. ಪಕ್ಕದಲ್ಲಿ ಹರಿಯುವ ಗಂಗೆಯನ್ನು ಬಿಟ್ಟು ಶುದ್ಧಿಗಾಗಿ ಮತ್ತಾವುದೋ ದೂರದ ತೀರ್ಥಕ್ಕೆ ಜನರು ಹೋಗುತ್ತಾರೆ''.

ಆಗ ರಾಮ, ಕೃಷ್ಣರಾದಿಯಾಗಿ ಎಲ್ಲರೂ ಕೇಳುವಂತೆ ಮುನಿಗಳೆಂದರು, ''ವಸುದೇವನೇ, ಕರ್ಮದಿಂದ ಕರ್ಮಪರಿಹಾರವಾಗುವುದಕ್ಕೊಂದು ಉಪಾಯವಿದೆ. ಅದೇ ಯಜ್ಞದ ಮೂಲಕ ಯಜ್ಞರೂಪಿಯಾದ ಮಹಾವಿಷ್ಣುವನ್ನು ಶ್ರದ್ಧೆಯಿಂದ ಆರಾಧಿಸುವುದು. ಮನುಷ್ಯನನ್ನು ಮೂರು ಏಷಣ (ಆಸೆ)ಗಳು ಕಾಡುತ್ತವೆ. ಈ ಏಷಣ ತ್ರಯವನ್ನು ಉಪಶಮಗೊಳಿಸುವುದು ಹೀಗೆ- ಯಜ್ಞ, ದಾನಗಳಿಂದ ವಿತ್ತೈಷಣವನ್ನು ಗೆಲ್ಲಬೇಕು. ಗೃಹಸ್ಥಧರ್ಮಪಾಲನೆಯಿಂದ ಪುತ್ರೈಷಣವನ್ನು ಶಮನಗೊಳಿಸಬೇಕು. ಲೌಕಿಕ ಧರ್ಮಪಾಲನೆಯಿಂದ ಲೋಕೈಷಣವನ್ನು ಕಳೆದುಕೊಳ್ಳಬೇಕು. ಹೀಗೆ ಏಷಣತ್ರಯವನ್ನು ಜಯಿಸಿದವನು ನಾಡನ್ನು ಬಿಟ್ಟು ಕಾಡಿಗೆ ಹೊರಟು ಹೋಗುವವನು. ಮನುಷ್ಯನಿಗೆ, ಮುಖ್ಯವಾಗಿ ತ್ರೈವರ್ಣಿಕರಿಗೆ ದೇವ, ಋಷಿ, ಪಿತೃಋಣವೆಂಬ ಮೂರು ಋಣಗಳಿವೆ. ಅಧ್ಯಯನ ದಿಂದ ಋಷಿಋಣವನ್ನು, ಮಕ್ಕಳನ್ನು ಪಡೆಯುವು ದರಿಂದ ಪಿತೃಋಣವನ್ನು ನೀನು ತೀರಿಸಿರುವೆ. ಈಗ ಯಜ್ಞಗಳನ್ನು ನಡೆಸುವ ಮೂಲಕ ದೇವಋಣವನ್ನು ತೀರಿಸು''.

ಋಷಿಗಳ ಈ ಆದೇಶವನ್ನು ಪರಮಾದರದಿಂದ ಒಪ್ಪಿಕೊಂಡ ವಸುದೇವನು ಆಗಲೇ ಯಜ್ಞದ ಸಂಕಲ್ಪ ಮಾಡಿ ಅಲ್ಲಿದ್ದ ಋಷಿಗಳನ್ನೇ ಋತ್ವಿಜರನ್ನಾಗಿ ವರಣ ಮಾಡಿ ಯಜ್ಞ ದೀಕ್ಷಿತನಾದನು. ಅನೇಕ ದಿನಗಳಲ್ಲಿ ಅನೇಕ ಯಜ್ಞಗಳನ್ನು ನೆರವೇರಿಸಿದನು. ಯಜ್ಞಾಂತ್ಯದಲ್ಲಿ ಅವಭೃತ ಸ್ನಾನವನ್ನೂ ಪೂರೈಸಿ, ಋತ್ವಿಜರಿಗೆ, ಬ್ರಾಹ್ಮಣರಿಗೆ, ಇತರ ವರ್ಣದವರಿಗೆ ದಾನ, ಧರ್ಮಗಳನ್ನು ಮಾಡಿದನು. ಬ್ರಾಹ್ಮಣರಿಂದ ಹಿಡಿದು ನಾಯಿಗಳ ವರೆಗೆ ಸಮಸ್ತ ಜೀವಿಗಳನ್ನು ಮೃಷ್ಟಾನ್ನ ಭೋಜನದಿಂದ ತೃಪ್ತಿಪಡಿಸಿದನು. ಅನಂತರ ಋಷಿಗಳು ತಂತಮ್ಮ ಆಶ್ರಮಗಳಿಗೆ ಹೊರಟು ಹೋದರು. ಧೃತರಾಷ್ಟ್ರಾದಿಗಳು, ಯುಧಿಷ್ಠಿರಾದಿ ಪಾಂಡವರು, ಮತ್ತಿತರ ರಾಜರೂ ವಸುದೇವನಿಂದ ಬೀಳ್ಕೊಂಡು ತಂತಮ್ಮ ದೇಶಗಳಿಗೆ ತೆರಳಿದರು. ನಂದಗೋಪನಂತು ವಸುದೇವ, ರಾಮ, ಕೃಷ್ಣರನ್ನು ಬಿಟ್ಟಿರಲಾರದೆ ಅನೇಕ ದಿನಗಳನ್ನು ಅಲ್ಲೇ ಕಳೆದನು. ಕೊನೆಗೆ ಮನಸ್ಸಿಲ್ಲದ ಮನಸ್ಸಿನಿಂದ ಅವರನ್ನೆಲ್ಲ ಬಿಟ್ಟು ಪರಿವಾರ ಸಮೇತ ನಂದಗೋಕುಲದ ಕಡೆಗೆ ಮುಖ ಮಾಡಿದನು. ಗೋಪಿಯರು ಕೃಷ್ಣವಿರಹವನ್ನು ಸಹಿಸಲಾರದೆ ಕಣ್ಣೀರು ಸುರಿಸುತ್ತಾ ವ್ರಜಕ್ಕೆ ನಡೆದರು. ಯಾದವರು ಮಳೆಗಾಲದ ಆರಂಭದ ತನಕ ಸಮಂತ ಪಂಚಕದಲ್ಲಿದ್ದು ದ್ವಾರಕೆಗೆ ಹಿಂದಿರುಗಿದರು.

(ಮುಂದುವರಿಯುವುದು)

# ಶ್ರೀಶಾರದಾ ವೇದಿಕೆಯ ಮಹಾಪೋಷಕರಾಗಿ ಮಟ್ಟು ದಿವಾಕರ ರಾವ್ ಮುಂಬೈ

ಮುಂಬೈಯ ವಸಾಯ್‌ನಲ್ಲಿ ವಾಸ್ತವ್ಯದಲ್ಲಿರುವ ಮಟ್ಟು ದಿವಾಕರರಾಯರು ಶ್ರೀಶಾರದಾ ಪತ್ರಿಕೆಯ ಮಹಾಪೋಷಕರಾಗಿ ಪತ್ರಿಕೆಗೆ ಪ್ರೋತ್ಸಾಹ ನೀಡಿದ್ದಾರೆ. ಉಡುಪಿ ತಾಲೂಕು, ಮಟ್ಟು ಗ್ರಾಮದ ದಿ.ನಾರಾಯಣರಾವ್ ಮತ್ತು ದಿ.ಶಾರದಮ್ಮ ದಂಪತಿಗಳ ಪುತ್ರರಾಗಿದ್ದು , ಕಟಪಾಡಿಯ ಎಸ್.ವಿ.ಎಸ್.ಪ.ಪೂ. ಕಾಲೇಜಿನಲ್ಲಿ ಎಸ್.ಎಸ್.ಎಲ್.ಸಿ. ತೇರ್ಗಡೆಯಾದ ನಂತರ ಉದ್ಯೋಗ ಅರಸಿ ಮಹಾರಾಷ್ಟ್ರಕ್ಕೆ ತೆರಳಿದರು. ಅಲ್ಲಿ ಸ್ವಪ್ರಯತ್ನದಿಂದ ಮುಂದಿನ ವಿದ್ಯಾಭ್ಯಾಸವನ್ನು ಮುಂದುವರೆಸಿ, ಬಿ.ಕಾಂ. ಪದವಿ ಪಡೆದು ಪೂನಾ ಯುನಿವರ್ಸಿಟಿಯಲ್ಲಿ "ಡಿಪ್ಲೊಮಾ ಇನ್ ಇಂಡಸ್ಟ್ರಿಯಲ್ ಮೆನೇಜ್‌ಮೆಂಟ್ & ಎಕೌಂಟೆನ್ಸಿ"ಯಲ್ಲಿ ವಿಶೇಷ ತರಬೇತಿ ಪಡೆದು "ದಿ ಇಂಡಿಯನ್ ಎಕ್ಸ್‌ಪ್ರೆಸ್ ಲಿಮಿಟೆಡ್, ಮುಂಬೈ" ಯಲ್ಲಿ 1979ರಲ್ಲಿ ಖ್ಯಾತ ಪತ್ರಿಕೋದ್ಯಮಿ ಹಾಗೂ ಕಂಪನಿಯ



ಸಂಸ್ಥಾಪಕರಾದ ದಿ.ರಾಮನಾಥ ಗೋಯಂಕಾರವರ ಆಪ್ತ ಕಾರ್ಯದರ್ಶಿಯಾಗಿ ಕೆಲಸಕ್ಕೆ ಸೇರಿದರು. ಮುಂದೆ ಕಂಪನಿಯಲ್ಲಿ ಭಡ್ತಿ ಪಡೆಯುತ್ತಾ ಸದ್ಯ "ದಿ ಇಂಡಿಯನ್ ಎಕ್ಸ್‌ಪ್ರೆಸ್ ಲಿಮಿಟೆಡ್, ಮುಂಬೈ"ಯಲ್ಲಿ ಡೆಪ್ಯೂಟಿ ಜನರಲ್ ಮೆನೇಜರ್‌ರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ, ಇವರ ಕಾರ್ಯ ದಕ್ಷತೆಗಾಗಿ ಕಂಪನಿಯಿಂದ ಹಲವಾರು ಪ್ರಶಸ್ತಿಗಳನ್ನೂ ಪಡೆದಿರುತ್ತಾರೆ.

ಕುಮಟಾ ವಾಲಗಳ್ಳಿಯ ಶ್ರೀಮತಿ ಹೀರಾರನ್ನು ಇವರು ವಿವಾಹವಾಗಿದ್ದು, ಈ ದಂಪತಿಯ ಪುತ್ರ ಶ್ರೀ ಮದನ್ ರಾವ್ ಕಂಪ್ಯೂಟರ್ ಸೈಯನ್ಸ್‌ನಲ್ಲಿ ಇಂಜಿನಿಯರಿಂಗ್ ಪದವಿ ಪಡೆದು ಸದ್ಯ ಇನ್‌ಫೋಸಿಸ್ ಲಿಮಿಟೆಡ್ ಪೂನಾ ಶಾಖೆಯಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಶ್ರೀಯುತ ದಿವಾಕರ್ ರಾವ್ ಇವರು ಶ್ರೀ ಶಾರದಾ ಪತ್ರಿಕೆಯ ಸಂಪಾದಕರಾದ ಕೃಷ್ಣಕುಮಾರ್ ರಾವ್ ಮಟ್ಟು ಅವರ ಕಿರಿಯ ಸಹೋದರರಾಗಿದ್ದಾರೆ. ಶ್ರೀ ದಿವಾಕರರಾವ್ ಮಟ್ಟು ಹಾಗೂ ಅವರ ಕುಟುಂಬಕ್ಕೆ ಶ್ರೀ ಶಾರದೆಯು ಇನ್ನೂ ಹೆಚ್ಚಿನ ಶ್ರೇಯಸ್ಸನ್ನುಂಟುಮಾಡಲಿ ಎಂದು ಹಾರೈಸುತ್ತಾ ಅವರನ್ನು ಶ್ರೀಶಾರದಾ ಮಹಾಪೋಷಕರಾಗಿ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇವೆ.

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ದಿ। ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ

# ಗುರುವಂದನ-ಕಾರ್ಯಕ್ರಮ



“ಪ್ರಪಂಚದಲ್ಲಿ ಯಾರೇ ಹೊಗಳಲಿ, ಎಷ್ಟು ದೊಡ್ಡ ಸನ್ಮಾನವೇ ನಡೆಯಲಿ ಅದೆಲ್ಲದಕ್ಕಿಂತ ಅತ್ಯಂತ ಸಂತಸ ಕೊಡುವಂತಹ ಸಂಗತಿ ಎಂದರೆ ಅದು ಮನೆಯಲ್ಲಿ ಮನೆ ಮಂದಿ ಮಾಡುವ ಹೊಗಳಿಕೆ, ನೀಡುವ ಗೌರವ. ಈ ದಿನ ನೀವು ನನ್ನನ್ನು ಈ ವೇದಿಕೆಯಲ್ಲಿ ಕುಳ್ಳಿರಿಸಿ ಗೌರವಿಸಿದ್ದೀರಿ. ಅದೂ ಈ ಶುಭದಿನ, ನಮ್ಮ ಭಾರತ ಸ್ಕೌಟ್ ಸಂಸ್ಥಾಪಕ ಪರಮಪೂಜ್ಯ ಬೇಡನ್ ಪೊವೆಲ್‌ರವರ ಜನ್ಮ ದಿನದಂದು ಗೌರಸುತ್ತಿರುವುದೆಂದರೆ ನಾನು ಧರಿಸಿರುವ ಗೈಡ್ಸ್ ಸಮವಸ್ತ್ರಕ್ಕೆ ದೊರೆತ ಗೌರವ ಎಂದು ಕೊಳ್ಳುತ್ತೇನೆ. ಈ ಶಾಲೆ ನನ್ನ ಕನಸಿನ ಕೂಸು. ಕೂಸು ಬೆಳೆದು ಜನ್ಮವಿತ್ತವರನ್ನು ಶುದ್ಧ ಮನಸ್ಸಿನಿಂದ, ಭಕ್ತಿ ಗೌರವದಿಂದ ಸನ್ಮಾನಿಸುತ್ತಿರುವುದು ಭಾರತೀಯ ಸಂಸ್ಕೃತಿಯ ಮಾತೃದೇವೋಭವ, ಗುರುದೇವೋಭವ ಎಂಬ ಆದರ್ಶದ ಪ್ರತಿಬಿಂಬ. ನನ್ನ ಶಾಲೆಯ ನನ್ನ ಮಕ್ಕಳು ನನ್ನನ್ನು ಗೌರವಿಸುತ್ತಿದ್ದಾರೆಂದರೆ ನನ್ನ ವೃತ್ತಿ ಜೀವನ ಸಾರ್ಥಕವಾಯ್ತೆಂದು ಭಾವಿಸುತ್ತೇನೆ. ಇದಕ್ಕಿಂತ ಸಂತೋಷ ನನಗೆ ಬೇರೆ ಇಲ್ಲ” ಎಂದು ತೆಳ್ಳಾರು ಶ್ರೀ ಬಿ. ಮಂಜುನಾಥ ಪೈ ಸ್ಮಾರಕ ಸರಕಾರಿ ಪ್ರೌಢಶಾಲೆಯ ಸ್ಥಾಪಕ ಮುಖ್ಯೋಪಾಧ್ಯಾಯರಾದ ಶ್ರೀಮತಿ ಸಾವಿತ್ರಿ ಮನೋಹರ್ ನುಡಿದರು. ಅವರು ಪ್ರೌಢಶಾಲೆಯಲ್ಲಿ ಹಮ್ಮಿಕೊಂಡ ಭಾರತದ ರಾಷ್ಟ್ರಪತಿ ರಾಧಾಕೃಷ್ಣನ್‌ರವರ ಜನ್ಮದಿನಾಚರಣೆಯ ಅಂಗವಾಗಿ ಹಮ್ಮಿಕೊಂಡ ಗುರುವಂದನ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಕೃತಜ್ಞತಾ ಭಾಷಣ ಮಾಡುತ್ತಿದ್ದರು. ಪ್ರಭಾರ ಮುಖ್ಯ ಶಿಕ್ಷಕಿ ಶ್ರೀಮತಿ ಇಂದಿರಾ ಸ್ವಾಗತಿಸಿದರು. ಶ್ರೀಮತಿ ಗೌರಿ ಕುಮಾರಿ ಕಾರ್ಯಕ್ರಮ ನಿರ್ವಹಿಸಿ 'if you are engaged, you will be young aged' ಎಂಬ ಸಾವಿತ್ರಿ ಮನೋಹರರ ಧ್ಯೇಯ ವಾಕ್ಯವನ್ನು ತಾನು ಸದಾ ತರಗತಿಗಳಲ್ಲಿ ಹೇಳುತ್ತಾ ಅವರು ಹಾಕಿ ಕೊಟ್ಟ ಮಾರ್ಗದಲ್ಲಿ ನಡೆಯುತ್ತಿದ್ದೇನೆ. ಮೇಡಂಗೆ ದೇಹಕ್ಕೆ ಅರವತ್ನಾಲ್ಕು ವರ್ಷ ಆಗಿದ್ದರೂ ಅವರ ಆಸಕ್ತಿಗೆ ಇನ್ನೂ ಇಪ್ಪತ್ನಾಲ್ಕು ವರ್ಷ ಎಂದು ನುಡಿದರು. ಸ್ಕೌಟ್ ಮಾಸ್ಟರ್ ಶ್ರೀ ರವಿಯವರು ಪ್ರತೀ ವರ್ಷದಂತೆ ಚಿಂತನ ದಿನದ ಸಿಹಿತಿಂಡಿಯ ಪ್ರಾಯೋಜಕರಾದ ಗೈಡ್ ಕ್ಯಾಪ್ಟನ್ ಶ್ರೀಮತಿ ಸಾವಿತ್ರಿ ಮನೋಹರ್ ಎ.ಎಲ್.ಟಿ. ಅವರಿಗೆ ಧನ್ಯವಾದತ್ತರು

**-ಶ್ರೀಮತಿ ಇಂದಿರಾ ಕಾರ್ಕಳ**

# ಸಾಧನೆಗೆ ಸಂದ ಗೌರವ



**“ಒಬ್ಬ ವ್ಯಕ್ತಿ ಮನಸ್ಸು ಮಾಡಿದರೆ ಯಾವ ಕೆಲಸವೂ ಕಷ್ಟವಲ್ಲ. ಸಾಧನೆಗೆ ಅಸಾಧ್ಯವಾದುದು ಯಾವುದೂ ಇಲ್ಲ. ಇದಕ್ಕೆ ಉದಾಹರಣೆ ಶ್ರೀ ಎಂ. ಆರ್. ವಾಸುದೇವ.** ತಮ್ಮ ನಿಷ್ಕಳಂಕ ವ್ಯಕ್ತಿತ್ವದಿಂದ, ಅಚಲ ವಿಶ್ವಾಸದಿಂದ, ಅವಿರತ ಶ್ರಮದಿಂದ ಇಂಚು ಇಂಚಾಗಿ ಮೇಲೇರುತ್ತ ಇಂದು ನಿವೃತ್ತರಾದರೂ ಶ್ರೇಷ್ಠ ಆಡಳಿತಗಾರ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಹುಡುಕಿದರೂ ಒಂದು ಕಪ್ಪು ಚುಕ್ಕೆ ಕಾಣದಂತಹ ಪಾರದರ್ಶಕ ಆಡಳಿತ ನಡೆಸಿ, ತಮ್ಮ ಹಿತಮಿತ, ಮೃದು ವಚನಗಳಿಂದ ಸರ್ವರ ಸಹಕಾರದಿಂದ ಮಂಗಳೂರಿನ ವಿಮಾನ ನಿಲ್ದಾಣವನ್ನು ಅಂತರಾಷ್ಟ್ರೀಯ ವಿಮಾನ ನಿಲ್ದಾಣವನ್ನಾಗಿಸಿದ ಶ್ರೀ ವಾಸುದೇವ ಇವರ ಆಡಳಿತ ಇತರರಿಗೆ ಅನುಕರಣೀಯ. ಅವರನ್ನು ಸನ್ಮಾನಿಸುವ ಯೋಗ ಸಿಕ್ಕಿದ್ದು ನಮ್ಮ ಪುಣ್ಯ” ಎಂದು ಶ್ರೀ ನಂದಳಿಕೆ ಬಾಲಚಂದ್ರ ರಾಯರು ನುಡಿದರು.

ಶ್ರೀಯುತರು ಕಾರ್ಕಳದ ಶ್ರೀ ಶಂಕರ ಪ್ರತಿಷ್ಠಾನ ಇತ್ತೀಚೆಗೆ ಹಮ್ಮಿಕೊಂಡ ಎಂ. ಆರ್. ವಾಸುದೇವ ಇವರ ಅಭಿನಂದನಾ ಕಾರ್ಯಕ್ರಮದಲ್ಲಿ ಶ್ರೀ ವಾಸುದೇವರನ್ನು ಅಭಿನಂದಿಸಿ ಮಾತನಾಡುತ್ತಿದ್ದರು. ಪ್ರತಿಷ್ಠಾನದ ಅಧ್ಯಕ್ಷ ಶ್ರೀ ಎ. ರಾಮ ಮೋಹನರಾಯರು ಅಧ್ಯಕ್ಷತೆ ವಹಿಸಿದ್ದರು. ಪ್ರತಿಷ್ಠಾನದ ಪದಾಧಿಕಾರಿಗಳು ಒಟ್ಟಾಗಿ ಶ್ರೀಯುತರನ್ನು ಸನ್ಮಾನಿಸಿದರು.

ಸನ್ಮಾನ ಸ್ವೀಕರಿಸಿದ ಶ್ರೀ ವಾಸುದೇವರವರು ಕೃತಜ್ಞತೆ ಸಲ್ಲಿಸುತ್ತ “ನಾನು ನನ್ನ ಮಾತಾಪಿತರಿಂದ ಪ್ರೇರಣೆಗೊಂಡು ಆತ್ಮ ವಿಶ್ವಾಸದಿಂದ ಅಧಿಕಾರದ ವಿವಿಧ ಹಂತಗಳಲ್ಲಿ ಪ್ರಾಮಾಣಿಕವಾಗಿ ದುಡಿದಿದ್ದೇನೆ. ಆತ್ಮ ತೃಪ್ತಿಯಿಂದ ನಿವೃತ್ತನಾಗಿದ್ದೇನೆ. ನನ್ನನ್ನು ಕಾರ್ಕಳಕ್ಕೆ ಕರೆದು ಗೌರವಿಸಿದ್ದೀರಿ. ಈ ನಿಮ್ಮ ವಿಶ್ವಾಸ, ಪ್ರೀತಿಗೆ ನಾನು ಋಣಿಯಾಗಿದ್ದೇನೆ” ಎಂದು ನುಡಿದರು. ವೇದಿಕೆಯಲ್ಲಿ ಶ್ರೀ ನಕ್ರೆ ಶಿವರಾವ್, ಭಾರತಿ ಐ.ಕೆ, ವಾಸುದೇವರಾವ್, ನಂದಳಿಕೆ ಬಾಲಚಂದ್ರ ರಾವ್, ಎ.ರಾಮಮೋಹನ ರಾವ್, ರತ್ನಾಕರ ರಾವ್, ನಿರ್ಮಲಾ ರಾವ್, ಶೈಲಜಾ ರಾವ್, ಚಂದ್ರಶೇಖರ್ ರಾವ್, ಆನಂದ ರಾವ್ ಮತ್ತು ಶೈಲಾ ರಮೇಶ್ ರಾವ್ ಉಪಸ್ಥಿತರಿದ್ದರು.

**-ಶ್ರೀಮತಿ ಸಾವಿತ್ರಿ ಮನೋಹರ್**

# ನಂದಿಕೂರು ಶ್ರೀಮತಿ ಸರೋಜಿನಿ ದೇವರಾವ್ ಇವರ ಆಯೂರಾರೋಗ್ಯ ಅಭಿವೃದ್ಧಿಗಾಗಿ ಹಾಗೂ ಚಿರಂಜೀವಿಗಳ ಶ್ರೇಯ ಸಿದ್ಧಿಗಾಗಿ ನಡೆದ ಶಾಂತಿ ಕರ್ಮಾಂಗಗಳು



ದಿನಾಂಕ 27-1-2013ನೇ ರವಿವಾರ ನಂದಿಕೂರಿನ ಶ್ರೀಮತಿ ಸರೋಜಿನಿ ದೇವರಾವ್ ಇವರ ಆಯೂರಾರೋಗ್ಯ ಅಭಿವೃದ್ಧಿಗಾಗಿ ಹಾಗೂ ಇವರ ಚಿರಂಜೀವಿಗಳ ಶ್ರೇಯ ಸಿದ್ಧಿಗಾಗಿ ಶಾಂತಿ ಕರ್ಮಾಂಗಗಳನ್ನು ನಂದಿಕೂರಿನಲ್ಲಿರುವ ಅವರ ಸ್ವಗ್ರಹ “ಶ್ರೀ ದೇವಿ ಕೃಪಾ”ದಲ್ಲಿ ಇವರ 71ನೇಯ ವರುಷದ ಸಂಭ್ರಮಾಚರಣೆಯೊಂದಿಗೆ ಆಚರಿಸಲಾಯಿತು.

ಹಿಂದಿನ ದಿನ ಅತಿಥಿ ಅಭ್ಯಾಗತರಿಗೆ ಮನೋರಂಜನೆ ನೀಡುವ ಸಲುವಾಗಿ ಸಾಯಂಕಾಲ ಗಂಟೆ 6-30 ರಿಂದ ರಾತ್ರಿ ಗಂಟೆ 9-30 ರವರೆಗೆ ಅವರ ಮಕ್ಕಳ ಮತ್ತು ಮೊಮ್ಮಕ್ಕಳು ಹಾಗೂ ಸುರತ್ಕಲ್ಲಿನ “ಅಮೃತೆ ವರ್ಷಿಣಿ” ಬಳಗದವರಿಂದ ಸಂಗೀತ ರಸಮಂಜರಿ ಕಾರ್ಯಕ್ರಮ ನಡೆಯಿತು. ಕುಟುಂಬದ ಹಿರಿಯರಾದ ಶ್ರೀಮತಿ ಸ್ನೇಹಲತಾ ದಿವಾಕರ್ ರಾವ್ ಇವರ ಪ್ರಾರ್ಥನೆ ಹಾಗೂ ಶುಭ ಹಾರೈಕೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು.

ಮರುದಿನ ತಾ.27-1-2013 ರಂದು ಹಳೆಯಂಗಡಿಯ ಶ್ರೀಯುತ ಹರಿಕೃಷ್ಣ ಭಟ್ ಮತ್ತು ಉದಯ ಭಟ್ ಇವರು ಸುಮಾರು ಒಂಭತ್ತು ಜನ ಪುರೋಹಿತರ ಸಹಕಾರ ದೊಂದಿಗೆ ಬೆಳಿಗ್ಗೆ ಗಂಟೆ 6 ರಿಂದ ಮಧ್ಯಾಹ್ನ ಗಂಟೆ 12-30 ರವರೆಗೆ ಗಣಹೋಮ, ಆಯುಷ್ಯಹೋಮ, ನವಗ್ರಹ ಶಾಂತಿ ಪ್ರಧಾನಹೋಮ, ಧನ್ವಂತರಿ ಹೋಮ, ದೇವತಾ ಪೂಜೆಗಳನ್ನು ಸಾಂಗವಾಗಿ ನೆರವೇರಿಸಿದರು. ಬಳಿಕ ಶ್ರೀಮತಿ ಸರೋಜಿನಿ ದೇವರಾವ್ ಇವರಿಗೆ ಅವರ ಮಕ್ಕಳು ಹಾಗೂ ಕುಟುಂಬಿಕರು ಪಾದಪೂಜೆಗೈಯ್ದು ಗೌರವಾರ್ಪಣೆ ಮಾಡಿದರು ಹಾಗೂ ಆಶೀರ್ವಾದ ಪಡೆದರು. ಹಾಗೆಯೇ ಪಡುಬಿದ್ರಿಯ ಸ್ಥಾನಿಕ ಬ್ರಾಹ್ಮಣ ಸಂಘದ ಪರವಾಗಿ ಮಹಿಳಾ ವೇದಿಕೆಯ ಸದಸ್ಯೆಯರು ಗೌರವಾರ್ಪಣೆ ಮಾಡಿದರು. ಬಳಿಕ ಎಲ್ಲೂರಿನ ಶ್ರೀಮತಿ ವಾಣಿಸತೀಶರಾವ್ ಇವರಿಂದ ಸುಗಮ ಸಂಗೀತ ಕಾರ್ಯಕ್ರಮ ನಡೆಯಿತು.

**ಸೀತಾದೇವಿ ಬಾಸ್ಕರ್ ರಾವ್**

# ಶ್ರೀ ವಿಷ್ಣುಮೂರ್ತಿ ದೇವರಿಗೆ ಮಹಾರಂಗ ಪೂಜೆ.



ತಾ.17-12-2012ನೇ ಸೋಮವಾರ ದಂದು ಪಾದೆಬೆಟ್ಟುವಿನಲ್ಲಿ ವಾಸಿಸುತ್ತಿರುವ ಶ್ರೀಯುತ ಉಚ್ಚಿಲ ಸುಬ್ರಾಯರು ತಮ್ಮ 65ನೇ ವರ್ಷದ ಹುಟ್ಟುಹಬ್ಬದ ಪ್ರಯುಕ್ತ ತಮ್ಮ ಪತ್ನಿ ಶ್ರೀಮತಿ ಸುಮಿತ್ರ ಹಾಗೂ ಬಂಧು ಬಾಂಧವ ರೊಡಗೊಡಿ ಪಡುಬಿದ್ರಿ ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವರಿಗೆ ಮಹಾರಂಗ ಪೂಜೆಯನ್ನು ನಡೆಸಿದರು. ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀವಾಗೀಶ ಶಾಸ್ತ್ರಿಗಳ ಮಾರ್ಗದರ್ಶನದಲ್ಲಿ ರಂಗಪೂಜೆಯು ಸುಸಂಪನ್ನಗೊಂಡಿತು. ಅದೇ ದಿನ ಸ್ಥಾನಿಕ ಬ್ರಾಹಣಸಭಾ, ಪಡುಬಿದ್ರಿಯ ನಿರ್ದೇಶಕರಾದ ಶ್ರೀಯುತ ಪಿ.ಡಿ ಶೇಖರ್‌ರಾವ್ ಇವರು ದುಬೈಯಲ್ಲಿ ವಾಸ್ತವ್ಯವಿರುವ ತಮ್ಮ ಮಗಳು ಸಂಗೀತಾ ಹಾಗೂ ಅಳಿಯ ವಿನೋದ್ ರಾವ್ ಇವರು ನೀಡಿರುವ ಸ್ಟೀಲಿನ ಸಾಲು ದೀಪಗಳ ನಾಲ್ಕು ಕಂಬಗಳನ್ನು ದೀಪ ಬೆಳಗಿಸುವುದರ ಮೂಲಕ ದೇವರಿಗೆ ಸಮರ್ಪಿಸಿದರು. ಬಳಿಕ ಆಗಮಿಸಿದ ಸಮಾಜ ಬಾಂಧವರಿಗೆ ಅನ್ನ ಸಂತರ್ಪಣೆ ನಡೆಯಿತು.

**ಸೀತಾದೇವಿ ಬಾಸ್ಕರ್ ರಾವ್**

## INCREDIBLE INDIA

India is a country where Lord Rama & Krishna are born
It is also a country where simcard is cheaper than rice, wheat and corn.
Every Indian feels proud about Indian tradition and culture,
But in India, regionalism, communaslim etc... are flying high in sky like Vulture.
It is a victorious land where kings like Tippu and Ashoka ruled,
But today without a “Proper Ruler” our country is “clean bowled”
Our country is a holyland which became free by the part of peace,
But today our politicians are running behind bribe like mice behind cheese.
Once upon a time we had ministers like Rajivji, Indiraji & Atalji,
But today our ministers know one and only one “Ji” and that is “3G”.
We are all very lucky to be born in a country like “ India”,
But today we need to make up our minds to become “Indians”

**- Pragathi Bhandi Perdoor,** Poornaprajna College, Udupi

# ಕನ್ನದಲ್ಲಿ ಆಡಳಿತ...

-ಸಾವಿತ್ರಿ ಮನೋಹರ್ ಕಾರ್ಕಳ

ಹಾಂ ಎಲ್ಲೆಲ್ಲೂ ಹಾಸ್ಯರಸ ಸಂಜೀವಿನಿ ಒಸರುವುದನ್ನು ಕೇಳಿ ನಗು ತಡೆದುಕೊಳ್ಳಬೇಡಿ. ಬಾಯಿ ತುಂಬಾ ನಕ್ಕು ಬಿಡಿ ನಕ್ಕು ಹಗುರಾಗುವುದೂ ಒಳ್ಳೇಯದೇ. ಹಗುರಾಗುವುದರೊಂದಿಗೇ ತನುಮನ ಹಗುರಗೊಂಡಾಗ ಎಲ್ಲಾದರೂ ಒಮ್ಮೆ ಪ್ರವಾಸ ಹೋಗಿ ಬರುವ ಎಂದು ಆಸೆಯಾಗುತ್ತದೆ. ಅಲ್ವಾ ನಾವೂ ಕೂಡ ಒಮ್ಮೆ ಹೀಗೆ ಪ್ರವಾಸ ಹೊರಟಿದ್ದೆವು. ಆಗ ಚಿಮ್ಮಿದ ರಸ ಕಾರಂಜಿಯ ಬಗೆಗೆ ನಿಮ್ಮೊಂದಿಗೆ ನನ್ನ ಅನುಭವ ಹಂಚಿಕೊಳ್ಳದಿದ್ದರೆ ಹೇಗೆ?

ಅಂದು ಮುಂಜಾವಿನ ಮಂಜು ಕರಗುವ ಮುನ್ನ ಕಾರ್ಕಳದಿಂದ ಹೊರಟ ನಾವು ಬಸ್ಸಿನಲ್ಲಿ ಕುಳಿತಿದ್ದೆವಷ್ಟೆ. ಮೊದಲೇ ತನ್ನ ಸ್ವಭಾವ ಜನ್ಯ ಪ್ರಶ್ನೆಗಳಿಂದ ಹಿರಿಯರ ತಲೆ ತಿನ್ನುತ್ತಿದ್ದ ಆಶು ನನ್ನನ್ನು ಕೇಳಿದ. ಅಮ್ಮಾ ಮಹಿಳೆಯರಿಗಾಗಿ (R.T.O.) ಎಂದರೇನಮ್ಮಾ ಎಂದ ನನಗೆ ಮುಜುಗರವಾಯ್ತು. ಎಂತಹ ಕೊಳಕು ಪ್ರಶ್ನೆ ಕೇಳ್ತಿದ್ದಾನೆ. ಯಾರಾದ್ರೂ ಕೇಳಿಸಿಕೊಂಡ್ರೆ ಎಂತಹ ಆಭಾಸ ಅಂತ ನಂಗೆ ಸಿಟ್ಟು ಬಂದು ಅವನ ಬಾಯಿಗೆ ನನ್ನ ಕೈ ಮುಚ್ಚಿ" ಬಾಯಿ ಮುಚ್ಕೋ ತಲೆ ಹರಟೆ "ಅಂತ ಪಿಸುದನಿಯಲ್ಲಿ ಗದರಿಸಿದೆ. ನೀವೇ ಅವನ ಬಾಯಿ ಮುಚ್ಚಿದ್ದೀರಲ್ಲಾ ಅವನಿನ್ನೆಂತಾ ಬಾಯಿ-ಮುಚ್ಕೋದು ಅಂತ ಆಶೂನಂತೆ ನೀವು ಕೇಳಬಹುದಲ್ವಾ. ಯಾಕೇಂದ್ರೆ ಆಶೂಗೊಂದು ಕೆಟ್ಟ ಬುದ್ಧಿ ಇದೆ. ಅದೇನಂದ್ರೆ ನಾವು ಅವನಿಗೆ ಯಾವುದಾದರೂ ವಿಚಾರಕ್ಕೆ ಬಾಯಿ ಮುಚ್ಕೋ. ಅಂತ ಬೈದರೆ ಕೂಡಲೇ ಎದ್ದು ಬಂದು ನಮ್ಮ ಬಾಯಿಯನ್ನು ಅವನ ಪುಟ್ಟ ಕೈಯಿಂದ ಮುಚ್ಚಿ ಹಾಂ! ಬಾಯಿ ಮುಚ್ಚಿ ಆಯ್ತು ಎಂದು ಬಿಡ್ತಿದ್ದ. ಅದ್ಕೆ ಅವನ ಬಾಯಿಯನ್ನು ಮೊದಲೇ ಮುಚ್ಚಿ ಆಮೇಲೆ ಬೈದಿದ್ದು ಗೊತ್ತಾಯ್ತಾ. ಅಷ್ಟರಲ್ಲಿ ಮಗಳು ಸ್ವಾತಿಯೂ ಅದೇ ಪ್ರಶ್ನೆ ಕೇಳಿದಳು. ದೊಡ್ಡಸ್ವರದಲ್ಲಿ ಹೌದಮ್ಮಾ ಆಶೂ ಹೇಳಿದ್ದು ಸರಿ ನಂಗೂ ಅದು ಗೊತ್ತಾಗಲಿಲ್ಲ ಮಹಿಳೆಯರಿಗಾಗಿ (R.T.O.) ಅಂತ ಯಾಕೆ ಬರೆದಿದ್ದಾರೆ ಎಂದಾಗ ನಂಗೆ ಸಂಕೋಚದಿಂದ ಈ ಬಸ್ಸಿನ ತಳಬಂದು. ನನ್ನನ್ನು ನುಂಗಿ ಬಿಡಬಾರದೇ ಎನಿಸಿತು.

"ಏ ಕತ್ತೇ, ತೆಪ್ಪಗಿರು ಅಂತ ಪಿಸುಗುಟ್ಟಿದೆ. ತಲೆ ತಗ್ಗಿಸಿಕೊಂಡು ಅವಳ ತೊಡೆಗೆ ಚಿವುಟಿ ನಾನು ಕೈ ಸಡಿಲಿಸಿದ್ದೇ ತಡ. ಆಶು ಮತ್ತೆ ನುಡಿದ. ನಿಜಾಮ್ಮ ನೋಡು ಅಲ್ಲಿ ಬರೆದಿದ್ದಾರೆ. ಮಹಿಳೆಯರಿಗಾಗಿ (R.T.O.) ಅಂತ ಎಂದು ಡ್ರೈವರ್ ಸೀಟಿನ ಹಿಂದೆ ಬರೆದಿದ್ದುದ್ದನ್ನು ಬೆರಳು ಮಾಡಿ ತೋರಿಸಿದಾಗ ಬಸ್ಸಿನಲ್ಲಿದ್ದವರೆಲ್ಲರೂ ಹೋ ಎಂದು ನಗತೊಡಗಿದರು, ನಾನು ಅತ್ತ ನೋಡಿದೆ. ಅಲ್ಲಿ ಡ್ರೈವರ್ "ಹಿಂದಿನ ನಾಲ್ಕು ಸೀಟುಗಳು ಮಹಿಳೆಯರಿಗಾಗಿ" (R.T.O.) ಎಂದು ಇದ್ದ ಬರಹದ ಮೊದಲ ಅರ್ಧ ಡ್ರೈವರ್ ಹಿಂದಿನ ನಾಲ್ಕು ಸೀಟುಗಳು ಎಂಬುದನ್ನು ಯಾರೋ ಕಿಡಿಗೇಡಿಗಳು ಉಜ್ಜಿ ತೆಗೆದಿದ್ದರು. ಅಲ್ಲಿ ಮುಂದಿನರ್ಧ ಭಾಗ ಮಾತ್ರ ಉಳಿದಿತ್ತು ಅದನ್ನು ನೋಡಿ ನನಗೂ ನಗು ಬಂತು. ಎಲ್ಲರೊಡನೆ ನಾನು ನಗೆಗಡಲಿನಲ್ಲಿ ಮುಳುಗಿದೆ. ಮತ್ತೆ ಮಕ್ಕಳಿಗೆ ಆ ಬಗ್ಗೆ ತಿಳಿಹೇಳಿದೆ ಬಸ್ಸು ನಿಲ್ದಾಣದಲ್ಲಿ ಎಲ್ಲರೂ ಕೆಳಗಿಳಿದೆವು.

ಆಯ್ತು ಆಶು ಪುರಾಣ ಅಲ್ಲಿಗೇ ಮುಗಿಯಿತು ಅನ್ಕೋಬೇಡಿ. ಮೈಸೂರಿಗೆ ಹೋಗೋ ಬಸ್ಸು ಬಂದಿರ್ಲಿಲ್ಲ. ನಾವು ಸರಕಾರಿ ಬಸ್ಸಿಗಾಗಿ ಕಾಯ್ತಾ ಕೂತಿದ್ದೆವು. ಸರಿ ಕೂತಲ್ಲಿ ಕೂರೋ ಬುದ್ಧಿ ಇಲ್ಲದ ಮೂರನೇ ಕ್ಲಾಸಿನ ಪ್ರಳಯಾಂತಕ ಬುದ್ಧಿಯ ಆಶು ಒಂದು ರೌಂಡು ಅಲ್ಲೇ ತಿರುಗಾಡಿ ಬಂದ. ಅಕ್ಕನನ್ನು ಕರೆದು ಏನೋ ಕೇಳಿದ. ಅವಳು ನಂಗೊತ್ತಿಲ್ಲಪ್ಪಾ ಅಂತ ಕೈಯಲ್ಲಾಡಿಸಿದಳು. ಸರಿ ಮತ್ತೆ ನನ್ನ ಪಕ್ಕ ಬಂದು ಕೂತ್ಕೊಂಡ. ಇನ್ನೆಂಥಾ ವಿಚಿತ್ರ ಪ್ರಶ್ನೆ ಕೇಳ್ತಾನಪ್ಪಾ ಅಂತ ಯೋಚಿಸುವಷ್ಟರಲ್ಲಿ "ಅಮ್ಮಾ ಕನ್ನದಲ್ಲಿ ಆಡಳಿತ ಅಂದ್ರೇನು" ಎಂದು ಪ್ರಶ್ನೆ ಒಗದೇ ಬಿಟ್ಟ. ನಂಗೂ ಬಸ್ಸಿಗಾಗಿ ಕಾದು ಕಾದು ಮಂಡೆ ಬಿಸಿ ಏರಿತ್ತು. ಇವನ ಪ್ರಶ್ನೆ ಕೇಳಿ ಆ ಬಿಸಿಯಲ್ಲೂ ನಸುನಗು ಮೂಡಿತು. ಇದೆಂತಾ ಪ್ರಶ್ನೆ ಮಾರಾಯ ನಿಂದೂ ಅಂತ ಸ್ವಲ್ಪ ಅಸಹನೆಯಿಂದಲೇ ಕೇಳಿದೆ. ಮೊದಲೇ ಬಸ್ಸು ಬಂದಿಲ್ಲಾನ್ನೊ ಕಿರಿಕಿರಿ. ಅದ್ರ ಮಧ್ಯೆ ಇವನದ್ದೊಂದು ಪಿರಿಪಿರಿ ಶುರುವಾಯ್ತು ಅಂತ ಮನಸ್ಸು ಮುನಿಸಿ ಕೊಂಡಾಗಿತ್ತು. ಈಗ ತಮ್ಮನಿಗೆ ಅಕ್ಕನೂ ದನಿಗೂಡಿಸಿ ಹೌದಮ್ಮಾ "ಕನ್ನದಲ್ಲಿ ಆಡಳಿತ ಅಂದ್ರೇನಮ್ಮ ನಂಗೂ ಗೊತ್ತಾಗ್ಲಿಲ್ಲ" ಎಂದಳು. ಐದನೇ ಕ್ಲಾಸಿನ ಭಾರೀ ದೊಡ್ಡ ವಿದ್ವಾಂಸಳು. ಈ ಮಕ್ಕಿಗೇನಾದ್ರೂ ಕನ್ನ ಕೊರೆಯೋ ಕಥೆ ಹೇಳಿದ್ದೀನಾ ಅಂತ ನೆನಪು ಮಾಡಿಕೊಂಡೆ. ಬಹುಶಃ ದುರ್ಗಸಿಂಹನ ಪಂಚತಂತ್ರ ಗಂಭೀರೆ ಕಥೆಯಲ್ಲಿ ಕಳ್ಳರು ಕನ್ನಕೊರೆದ ಕಥೆ ನೆನಪಾಗಿರಬೇಕೆಂದುಕೊಂಡೆ. ಆ ಮುದ್ಕಿ ಕಳ್ಳರ ಮೂಗು ಕತ್ತರಿಸಿದಂತೆ. ಇವರು ನನ್ನ ತಾಳ್ಮೆಗೆ ಕತ್ತರಿ ಹಾಕ್ತಿದ್ದಾರೆ. ಸುಮ್ಮನೆ ಅಧಿಕ ಪ್ರಸಂಗದ ಪ್ರಶ್ನೆ. ನನ್ನ ತಲೆ ತಿಂತಾರೆ ಅನ್ನಿಸ್ತು. ಅದೆಲ್ಲಾ ನಿಮ್ಗೆ ಯಾಕೀಗ ಕನ್ನ ಅಂದ್ರೆ ಗೊತ್ತಲ್ಲ ಅನ್ನೋದ್ರೊಳಗೆ "ಹೋ! ಅದು ನೀನು ಹೇಳಿದ ಅಜ್ಜಿ ಕತೇಲಿ ಬಂದಿತ್ತಲ್ಲಾ. ಕಳ್ಳರು ಅಜ್ಜಿಮನೆ ಗೋಡೆ ಕೊರೆದರಲ್ಲಾ. ಅದೇ ಅಲ್ವಾ ಕನ್ನ ಅಂದ್ರೆ ಎಂದ ಮಹಾ ಜ್ಞಾಪಕ ಶಕ್ತಿಯ ಪ್ರಚಂಡ. ಹೌದು ಅದೇ ಅಂದೆ ಚುಟುಕಾಗಿ. ಹಾಗಾದ್ರೆ ಕನ್ನದಲಿ ಆಡಳಿತ ಅಂದ್ರೆ ಕಳ್ಳರ ಆಡಳಿತ ನಾ" ಎಂದ ಆಶು. ಹೂಂ! ಹಾಗೇ ಅಂದ್ಕೊ. ಆದ್ರೆ ಆ ವಿಚಾರ ಈಗ್ಯಾಕೆ ಬಂತೂ ಎಂದೆ. ಇಬ್ಬರೂ ಒಟ್ಟಿಗೇ ಓ ಅಲ್ಲಿ ನೋಡು. ದೊಡ್ಡ ಬೋರ್ಡಿನಲ್ಲಿ ಕನ್ನದಲ್ಲಿ ಆಡಳಿತ ಎಂದು ಬರೆದಿದೆ ಎಂದು ಬಸ್‌ಸ್ಟ್ಯಾಂಡಿನಲ್ಲಿ ನಿಲ್ಲಿಸಿದ್ದ ದೊಡ್ಡ ಪ್ರಚಾರ ಫಲಕ ತೋರಿಸಿದರು.

ನನಗೆ ಒಮ್ಮೆಲೆ ಎದೆ ಬಡಿತ ಜೋರಾಯ್ತು. ಬಾಯಿಯಿಂದ 'ಹಾಂ' ಎಂಬ ಉದ್ಗಾರ ಹೊರಟಿತು. ಕಣ್ಣಿಗೆ ಕನ್ನಡ ಏರಿಸಿ ನೋಡಿದೆ ಹೌದು ದೊಡ್ಡ ಅಕ್ಷರಗಳಲ್ಲಿ ಬರೆದಿದ್ದಾರೆ "ಕನ್ನದಲ್ಲಿಯೇ ಆಡಳಿತ" ಉತ್ತರಿಸದೆ ಮತ್ತೆ ನೋಡಿದೆ ಅಲ್ಲಿದ್ದ ತಪ್ಪು ಅರ್ಥ ಆಯ್ತು. ಯಾವನೋ ಪುಣ್ಯಾತ್ಮನಿಗೆ ಬರೆಯಲು ಹೇಳಿದ್ದಾರೆ. ಆತ ಬರೆದಿದ್ದಾನೆ. ಇವರು ಬೋರ್ಡು ನಿಲ್ಲಿಸಿದ್ದಾರೆ. ಆದರೆ ಯಾರೂ ಅದನ್ನು ಓದುವ ಶ್ರಮ ಪಡಲೇ ಇಲ್ಲ. "ಕನ್ನಡದಲ್ಲಿಯೇ ಆಡಳಿತ" ಅಂತ ಬರೆಯುವ ಪುಣ್ಯಾತ್ಮ 'ಡ' ಬಂಬ ಅಕ್ಷರ ಬಿಟ್ಟುಬಿಟ್ಟಿದ್ದಾನೆ. ಕನ್ನಡಕ್ಕೆ ಕನ್ನ ಹಾಕಿ ಕರ್ತವ್ಯ ಮುಗಿಸಿದ್ದಾನೆ ಅದನ್ನು ಮಕ್ಕಳಿಗೆ ಬಿಡಿಸಿ ಹೇಳಿ ವಿವರಿಸುವಷ್ಟರಲ್ಲಿ ನನಗೆ ಸಾಕೋ ಸಾಕಾಗಿ ಹೋಯ್ತು. ಬರೆಯುವವನು ಸ್ಕೂಲಿಗೆ ಹೋಗ್ಲಿಲ್ವಾ? ತಪ್ಪಾಗಿದ್ದನ್ನ ಹತ್ತು ಸಲ ಬರೆಸಬೇಕು. ಅವನ ಟೀಚರ್ ಅಂತ ಮಕ್ಕಳು ಹೇಳ್ತಾ ಇದ್ರೆ ಸುತ್ತಮುತ್ತ ಇದ್ದವರೆಲ್ಲಾ ಎಷ್ಟೋ ವರ್ಷಗಳಿಂದ ಇದ್ದ ಬೋರ್ಡಿನಲ್ಲಿನ ತಪ್ಪನ್ನು ಯಾರೂ ಗಮನಿಸಲೇ ಇಲ್ಲ. ನಿಮ್ ಮಗನಿಗೆ ಅವಾರ್ಡ್ ಕೊಡ್ಬೇಕು "ಮರೀ.....ನೀನು ಮುಂದೆ ಕನ್ನಡದ ಮೇಸ್ಟ್ರಾಗಿ ಬಿಡು ಎಲ್ಲರಿಗೂ ಕನ್ನಡ ಕಲಿಸ್ಬಹುದು". ಅಂತ ಆಡ್ಕೋತಾ ಇದ್ರೆ ನನಗೆ ನಮ್ಮ ಕನ್ನಡದ ಬಗೆಗೆ, ಬೋರ್ಡು ಬರಿಸಿದವರ ಆಲಕ್ಷ್ಯದ ಬಗೆಗೆ ನಖಶಿಖಾಂತ ಸಿಟ್ಟು ಬರ್ತಿತ್ತು. ಆ ಬಸ್ಸಿನಲ್ಲಿ ಯಾರೋ ಅಧಿಕ ಪ್ರಸಂಗಿಗಳು ಅರ್ಧವಾಕ್ಯ ಉಜ್ಜಿದ್ದರೆ ಇಲ್ಲಿ ಒಂದು ಅಕ್ಷರವನ್ನೇ ನುಂಗಿ ಹಾಕಿದ್ದಾರೆ "ಛೇ ಭಗವಂತಾ ಈ ನಮ್ಮ ನಾಡಿನ ಪುಣ್ಯ ಪುರುಷರಿಗೊಂದಷ್ಟು ಪ್ರಜ್ಞೆ ಕೊಡಪ್ಪಾ" ಎಂದು ಕಾಣದ ದೇವರಿಗೆ ಕೋರಿಕೆ ಸಲ್ಲಿಸುವಷ್ಟರಲ್ಲಿ ಮೈಸೂರ್ ಬಸ್ಸು ಬಂತು ಭರಭರನೆ ಬಸ್ಸು ಏರಿ ಮುಂದಿನ ಸೀಟಿನಲ್ಲಿ ಕೂತ್ಕೊಂಡೆ ಕೂಡಲೇ ಮೇಲೆ ಕಣ್ಣೋಡಿಸಿದೆ ಎಲ್ಲಾದ್ರೂ ಮಹಿಳೆಯರಿಗಾಗಿ R.T.O. ಎಂದು ಇದೆಯೇ ಅಂತ ಸದ್ಯ ಇರ್ಲಿಲ್ಲವಾದ್ದರಿಂದ ಉಸ್ಸಪ್ಪಾ ಎಂದು ದೊಡ್ಡ ಉಸಿರು ಬಿಡುವುದಕ್ಕೂ ಬುಸ್ ಎಂದು ಹೊಗೆಕಾರಿ ಬಸ್ಸು ಹೊರಡುವುದಕ್ಕೂ ಸರಿಯಾಯ್ತು.

# ಸಂಭ್ರಮದ ಸಪ್ತಶತಿ ಶಾಂತಿ ಮತ್ತು ಭೀಷ್ಮ ವಿಜಯ

ದಿನಾಂಕ 15-2-2013 ರಂದು ನಂದಳಿಕೆಯಲ್ಲೊಂದು ನಂದ ಗೋಕುಲದಂತಹ ಶ್ಯಾಮಧಾಮದ ಉದ್ಘಾಟನಾ ಸಂಭ್ರಮ. ವಿಧಿವತ್ತಾಗಿ ಸುದರ್ಶನ ಹೋಮ, ವಾಸ್ತು ಹೋಮಗಳ ಮಂಗಳ ಮುಹೂರ್ತದಲ್ಲಿ ಗೃಹಪ್ರವೇಶ, ಅದು ಅಂತಿಂತಹರವರ ಮನೆಯಲ್ಲ, ನಾಟಿವೈದ್ಯ ಶಾಂತಮ್ಮನವರ ಸಪ್ತಶತಿಯ, ಸಾಧನೆಯ ನಾಲ್ಕು ದಶಕಗಳ ಯಕ್ಷಗಾನ ಕಲಾಕಾರ ಜನಾರ್ಧನ ಶಾಸ್ತ್ರಿಯವರ ಶಾಂತಿಧಾಮ, ಅದೇ ಶ್ಯಾಮಧಾಮ.

ಇಂದು ಎಲ್ಲಾ ಗೃಹಪ್ರವೇಶ ಕಾರ್ಯಕ್ರಮಗಳು ಅದ್ದೂರಿಯ ಅಬ್ಬರದ ಸಂಗೀತದೊಡನೆ ನಡೆಯುವುದು ವಾಡಿಕೆಯಾಗಿದೆ. ಆದರೆ ಕವಿಮುದ್ದಣ್ಣನ ನಲ್ಮೆಯ ನಂದಳಿಕೆಯಲ್ಲಿ ಅಂದು ನಂದಾದೀಪ ಬೆಳಗಿದಂತಹ ನೂತನ ಕಾರ್ಯಕ್ರಮ. ಗೃಹಪ್ರವೇಶದ ಶುಭಸೂಚನೆಯಾಗಿ ಸತ್ಯನಾರಾಯಣ ಪೂಜೆ ನಡೆದರೆ ಏಳು ದಶಕಗಳಲ್ಲಿ ತನ್ನ ಬಾಳಿನಲ್ಲಿ ಎದುರಾದ ಏಳುಬೀಳುಗಳನ್ನು ಲೆಕ್ಕಿಸದೆ, ಮನೆಯ ಬಡತನವನ್ನು ಸವಾಲಾಗಿ ಸ್ವೀಕರಿಸಿ ಪತಿಯ ಸಂಸಾರದ ಆರ್ಥಿಕ ಪ್ರಗತಿಗೆ ಬೆಂಗಾವಲಾಗಿ ನಿಂತು ಹೈನುಗಾರಿಕೆ, ನಾಟಿವೈದ್ಯ, ಗೃಹ ಕೈಗಾರಿಕೆ (ಹಪ್ಪಳ ಸಂಡಿಗೆ) ಮೂಲಕ ಸಾರ್ಥಕ ಸತಿಯಾಗಿ ಸಂಸಾರ ನೌಕೆಯನ್ನು ಸಾಗಿಸಿ ಪ್ರಗತಿಯ ದಾರಿಯಲ್ಲಿ ನಡೆಸಿದ ಶಾಂತಮ್ಮನವರಿಗೆ ಭೀಮರತಿಶಾಂತಿ, ನವಗ್ರಹ ಶಾಂತಿ ನಂತರ ಚಂಡಿಕಾಯಾಗವನ್ನು ಚಂದದಿ ನಡೆಸಿ ಜನಾರ್ಧನ ಶಾಸ್ತ್ರಿಗಳು ಜನ್ಮ ಸಾರ್ಥಕ ಗೊಳಿಸಿಕೊಂಡರು.



ಊರ ಪೌರರ ಜೊತೆಗೆ ಊರ ಶಾಲಾ ಮಕ್ಕಳಿಗೆಲ್ಲಾ ಅದ್ದೂರಿ ಭೋಜನ ವ್ಯವಸ್ಥೆ ಮಾಡಲಾಗಿತ್ತು. ಅಪರಾಹ್ನ ಜಿಲ್ಲೆಯ ಪ್ರಸಿದ್ಧ ಯಕ್ಷಗಾನ ಕಲಾವಿದರಿಂದ ಭೀಷ್ಮ ವಿಜಯ ತಾಳ ಮದ್ದಲೆ ಕಾರ್ಯಕ್ರಮ ಏರ್ಪಡಿಸಿದ್ದರು. ಶ್ರೀ ಗೋವಿಂದ ಭಟ್ಟರನ್ನು ಅಭಿನಂದಿಸುವ ಕಾರ್ಯಕ್ರಮ ಇತರರಿಗೆ ಅನುಕರಣೀಯವಾಗಿತ್ತು. ಪ್ರತಿಭಾನ್ವಿತ ವೇಷಧಾರಿ ಶ್ರೀ ಜಗದಾಭಿರಾಮ ಪಡುಬಿದಿರೆ ಅವರನ್ನು ಗೌರವಪುರಸ್ಕಾರ ಪ್ರದಾನದ ಅಂಗವಾಗಿ ಶಾಲು ಹೊದಿಸಿ ಹಾರಹಾಕಿ ಫಲಪುಷ್ಪ ಸ್ಮರಣಿಕೆ ಇತ್ತು ಗೌರವಿಸಿ ಶಾಸ್ತ್ರಿಗಳು ಕಲಾ ಗೌರವ ಸಲ್ಲಿಸಿದರು. ಜೊತೆಗೆ ಯಕ್ಷ ಕಲಾವಿದರಾದ ಶ್ರೀದೇವಾನಂದ ಭಟ್ ಬೆಳುವಾಯಿ. ಶ್ರೀ ಅನಂತಪದ್ಮನಾಭ ಜೆನ್ನಿ, ಶ್ರೀ ಕಟೀಲು ಮುರಲೀಧರ ಭಟ್‌ರನ್ನು ಶಾಲು ಹೊದಿಸಿ ಗೌರವಿಸಿದ್ದು ಅವರ ಕಲಾರಾಧನೆಗೆ ಸಾಕ್ಷಿಯಾಗಿತ್ತು ಸಮಾರಂಭದ ಕೊನೆಯಲ್ಲಿ ದಾಂಪತ್ಯ ಜೀವನದ ಬೆಳ್ಳಿಹಬ್ಬ ಆಚರಿಸಿಕೊಂಡ ಶ್ರೀ ಜನಾರ್ದನ ಶಾಸ್ತ್ರಿ ದಂಪತಿಗಳನ್ನು ವೇದಿಕೆಗೆ ಬರಮಾಡಿಕೊಂಡರು. ಪರಸ್ಪರ ಹಾರ ಬದಲಾಯಿಸಿಕೊಳ್ಳಲು ವೇದಿಕೆಯ ಗಣ್ಯರು ಆಹ್ವಾನಿಸಿ ಅವರಿಬ್ಬರನ್ನೂ ಸಾರ್ವಜನಿಕವಾಗಿ ಸನ್ಮಾನಿಸಲಾಯ್ತು.

ಶ್ರೀ ನಂದಳಿಕೆ ಬಾಲಚಂದ್ರರಾವ್,ಅನಂತ ಪದ್ಮನಾಭ ಜೆನ್ನಿ, ಜಗದಭಿರಾಮ ಪಡುಬಿದ್ರಿ, ಗೋವಿಂದ ಭಟ್, ಬೆಳುವಾಯಿ ದೇವಾನಂದ ಭಟ್ ಹಾಗೂ ಬಿ.ಜನಾರ್ಧನ ಭಟ್ ಉಪಸ್ಥಿತರಿದ್ದರು ಶ್ರೀ ಪ್ರವೀಣ ಕುಮಾರರ ಪ್ರಾರ್ಥನೆಯೊಂದಿಗೆ ಆರಂಭವಾದ ಕಾರ್ಯಕ್ರಮವನ್ನು ಶ್ರೀನಂದಳಿಕೆ ಬಾಲಚಂದ್ರರಾಯರು ನಿರ್ವಹಿಸಿ ಕೊನೆಯಲ್ಲಿ ಧನ್ಯವಾದ ಸಲ್ಲಿಸಿದರು. ಶ್ರೀ ಸುಧಾಕರ ಆಚಾರ್ಯ ಯಕ್ಷಗಾನ ತಾಳಮದ್ದಲೆಯ ಸಂಯೋಜಕರಾಗಿದ್ದರು.

ಭೀಷ್ಮನಾಗಿ ಕೆ. ಗೋವಿಂದ ಭಟ್ಟರು, ಅಂಬೆಯಾಗಿ ಶ್ರೀ ವಾಸುದೇವರಂಗ ಭಟ್, ಗುರು ಪರಶುರಾಮರಾಗಿ ಶ್ರೀನಾಗೇಶ್‌ರಾವ್ ಬಾರ್ಕೂರು, ಭೀಷ್ಮನಾಗಿ ಶ್ರೀ ಜನಾರ್ಧನ ಶಾಸ್ತ್ರಿಯವರು ವಿಜೃಂಭಿಸಿದರು. ಹಿಮ್ಮೇಳದಲ್ಲಿ ಶ್ರೀ ಸೂಡ ಹರೀಶ ಶೆಟ್ಟಿ, ಕಟೀಲು ಮುರಳಿಧರ ಭಟ್, ಶ್ರೀದೇವಾನಂದ ಭಟ್ ಬೆಳುವಾಯಿ, ಶ್ರೀ ಪುರುಷೋತ್ತಮ ಹಾಗೂ ಶ್ರೀ ಚೇತನ್ ಸಹಕರಿಸಿದ್ದರು. ಸಾಲ್ವನಾಗಿ ಶ್ರೀ ಪಶುಪತಿ ಶಾಸ್ತ್ರಿ ವಿಟ್ಲ ಹಾಗೂ ವೃದ್ಧಬ್ರಾಹ್ಮಣನಾಗಿ ಶ್ರೀ ಸುಬ್ರಹ್ಮಣ್ಯ ಬೈಪಡಿತ್ತಾಯ ಸಹಕರಿದ್ದರು

-ಶ್ರೀಮತಿ ಸಾವಿತ್ರಿ ಮನೋಹರ್

Krishna Rao
Ph : 2520652
Mob. : 9902029048
KISHAN
Studio & Video
Indoor Photography & Port Folio Photography,
Video & Mixing, Lamination
MAIN ROAD, MAJOOR & BANTAKAL.

# ಕುಂದಾಪುರ ತಾಲೂಕು ಸ್ಥಾನಿಕ ಬ್ರಾಹ್ಮಣ ಸಂಘ (ರಿ.) : ವಾರ್ಷಿಕ ಮಹಾಸಭೆ


ಕುಂದಾಪುರ ತಾಲೂಕು ಸ್ಥಾನಿಕ ಬ್ರಾಹ್ಮಣ ಸಂಘ (ರಿ)ದ ವಾರ್ಷಿಕ ಅಧಿವೇಶನವು ದಿನಾಂಕ 23-12-2013ರ ರವಿವಾರ ಕಿರಿಮಂಜೇಶ್ವರ ಶ್ರೀ ಮತ್ತು ಶ್ರೀಮತಿ ಸುಮಾ ಅರುಣ ಶ್ಯಾನುಬೋಗ್ ಇವರ ಆತಿಥ್ಯದಲ್ಲಿ ಅಗಸ್ತ್ಯೇಶ್ವರ ದೇವಸ್ಥಾನದ ರಥಬೀದಿಯಲ್ಲಿ ಇರುವ ದಿ।ಶ್ರೀನಿವಾಸ ಶ್ಯಾನುಬೋಗ್ ವೇದಿಕೆಯಲ್ಲಿ ನೆರವೇರಿತು. ಶ್ರೀ ಗಣೇಶ್ ಅಧಿಕಾರಿ, ಅಧಿಕಾರಿ ಇಂಡಸ್ಟ್ರಿಸ್ ಮೈಸೂರು ಹಾಗೂ ಜ್ಞಾನಶಕ್ತಿ ಸಾಂಸ್ಕೃತಿಕ ಸಭಾ ಮೈಸೂರು ಇದರ ಅಧ್ಯಕ್ಷ ಆನಂದರಾವ್ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸಿ ಉದ್ಘಾಟಿಸಿ ಶುಭಕೋರಿದರು. ಅರುಣ ಶ್ಯಾನುಬೋಗ್ ಸ್ವಾಗತಿಸಿ ವಿನಾಯಕ ವರ್ತೆ ಕಾರ್ಯಕ್ರಮ ನಿರ್ವಹಿಸಿ, ವಂದಿಸಿದರು. ಶಿವಾನಂದ ಶ್ಯಾನುಭೋಗ್ ವೇದಘೋಷ ಮಾಡಿ ಹರ್ಷಿತಾ ಮತ್ತು ಸಂಜಿತಾ ಪ್ರಾರ್ಥಿಸಿದರು. ಮುಖ್ಯ ಅಭ್ಯಾಗತರಾಗಿ ವಿಜಯ ಕರ್ನಾಟಕ ದಿನಪತ್ರಿಕೆಯ ಮುಖ್ಯ ಉಪಸಂಪಾದಕರಾದ ಅಳದಂಗಡಿ ಕೃಷ್ಣ ಭಟ್ ಹಾಗೂ ಆನಂದರಾವ್ ಮೈಸೂರು ಭಾಗವಹಿಸಿದ್ದರು. ''ಯಾವ ಸಂಘರ್ಷಕ್ಕೂ ಎಡೆಮಾಡದೆ, ಸಾಮರಸ್ಯದಿಂದ ಸ್ಥಾನಿಕ ಬ್ರಾಹ್ಮಣರು ಕಳೆದುಕೊಂಡ ತಮ್ಮ ಸ್ಥಾನಮಾನಗಳನ್ನು ಉಳಿಸಿಕೊಳ್ಳಲು ಸಂಘದ ಮೂಲಕ ಹೋರಾಡಬೇಕು'' ಎಂಬ ಕಳಕಳಿಯ ಮನವಿಯನ್ನು ಕೃಷ್ಣಭಟ್ ಅಳದಂಗಡಿ ಸಮಾಜಬಾಂಧವರಿಗೆ ತಿಳಿಸಿದರು.

ಈ ಸಂದರ್ಭದಲ್ಲಿ ತಾಲೂಕಿನಲ್ಲಿ ಎಸ್.ಎಸ್.ಎಲ್.ಸಿ. ವಾರ್ಷಿಕ ಪರೀಕ್ಷೆಯಲ್ಲಿ ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆದ ಮತ್ತು ಪದವಿಪೂರ್ವ ಪರೀಕ್ಷೆಗಳಲ್ಲಿ ವಿಜ್ಞಾನ, ಕಲೆ, ವಾಣಿಜ್ಯ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗಳ ಪ್ರತಿಭೆಯನ್ನು ಗುರುತಿಸಿ ಉಮೇಶ ಶ್ಯಾನುಭೋಗ್ ಕಿರಿಮಂಜೇಶ್ವರ ನಗದು ಪುರಸ್ಕಾರವನ್ನು ನೀಡಿ ಗೌರವಿಸಿದರು. ಇದೆ ಸಂದರ್ಭದಲ್ಲಿ ತಾಲೂಕಿನಲ್ಲಿ ಹಿರಿಯರಾದ ಮತ್ಯಾಡಿ ಶ್ರೀನಿವಾಸ ರಾವ್ ಮತ್ತು ಅಬ್ಲಿಕಟ್ಟೆ ರತ್ನಾವತಿ ಹೆಬ್ಬಾರರನ್ನು ಮುಖ್ಯ ಅತಿಥಿಗಳು ಹಾರ, ಶಾಲು, ಸ್ಮರಣಿಕೆ, ಸನ್ಮಾನಪತ್ರ ಹಾಗೂ ಫಲಪುಷ್ಪಗಳನ್ನು ನೀಡಿ ಸನ್ಮಾನಿಸಿದರು.

ಸಂಘಕ್ಕೆ ರೂ.5000/-ಕ್ಕಿಂತ ಹೆಚ್ಚು ದೇಣಿಗೆ ನೀಡಿದ ಹಾಗೂ ಸದಸ್ಯರಾದವರನ್ನು ಗೌರವಿಸಲಾಯಿತು. ಸಮಾರಂಭದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಗಣೇಶರಾವ್ ವಹಿಸಿದ್ದರು. ಡಾ। ರವೀಂದ್ರ ದೊಡ್ಮನೆ ಮತ್ತು ಮಂಜುನಾಥ ಹೆಬ್ಬಾರ್ ಅತಿಥಿಗಳನ್ನು ಪರಿಚಯಿಸಿದರು. ಸುಬ್ರಹ್ಮಣ್ಯ ಜೋಯ್ಸ ಕಾರ್ಯಕ್ರಮ ನಿರ್ವಹಿಸಿ ಸಂಪತ್ ಕುಮಾರ್ ವಂದಿಸಿದರು. ಅಪರಾಹ್ನ ನಡೆದ ವಾರ್ಷಿಕ ಅಧಿವೇಶನದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಗಣೇಶರಾವ್ ವಹಿಸಿದ್ದರು. ಕಾರ್ಯದರ್ಶಿ ಜಯರಾಮ ಶ್ಯಾನುಬೋಗ್ ವಾರ್ಷಿಕ ವರದಿಯನ್ನು ಹಾಗೂ ಪ್ರೊ।ಶಂಕರ ರಾವ್ ಕಾಳಾವರ ಗತವರ್ಷದ ಆಯವ್ಯಯ ಪತ್ರವನ್ನು ಮಂಡಿಸಿದರು. ಅಗಲಿದ ಸಮಾಜ ಬಾಂಧವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಸತ್ಯನಾರಾಯಣ ಹೆಬ್ಬಾರ್ ಕಾರ್ಯಕ್ರಮ ನಿರ್ವಹಿಸಿದರು.

ಸಮಾರೋಪ ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ನಿವೃತ್ತ ಅಧಿಕಾರಿ ಉಪ್ಪುಂದ ನಾರಾಯಣ ಮಯ್ಯ ಆಗಮಿಸಿದ್ದರು. ತಾಲೂಕಿನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಪ್ರಾಯೋಜಕರಾದ ಶ್ರೀಮತಿ ಪುಷ್ಪಲತಾ ಯು. ಶ್ಯಾನುಬೋಗ್ ನೀಡಿದರು. ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಪ್ರಾಯೋಜಕರಾದ ದಯಾನಂದರಾವ್ ಪಡುವರಿ ಬಹುಮಾನ ನೀಡಿದರು. ವೇದಿಕೆಯಲ್ಲಿ ಹಿರಿಯಣ್ಣರಾವ್, ಮಹಿಳಾವೇದಿಕೆ ಅಧ್ಯಕ್ಷೆ ಪಾರ್ವತಿ ಬೈಂದೂರು, ಯುವವೇದಿಕೆ ಅಧ್ಯಕ್ಷ ಸಂಪತ್ ಕುಮಾರ್, ರವೀಂದ್ರ ದೊಡ್ಮನೆ ಉಪಸ್ಥಿತರಿದ್ದರು. ಕಾರ್ಯಕ್ರಮದ ಪ್ರಾಯೋಜಕರಾದ ಅರುಣ ಶ್ಯಾನುಭೋಗ್ ದಂಪತಿಗಳನ್ನು ಸನ್ಮಾನಿಸಲಾಯಿತು. ಶೇಷಪ್ಪಯ್ಯ ಅತಿಥಿಗಳನ್ನು ಪರಿಚಯಿಸಿದರು. ಶಾಂತಗಣೇಶ್ ಕಾರ್ಯಕ್ರಮ ನಿರ್ವಹಿಸಿ, ಪ್ರೊ। ಶಂಕರರಾವ್, ಕಾಳಾವರ ವಂದಿಸಿದರು.

# ಕನ್ನಡ ಕವಿಕಾವ್ಯ ಪರಿಚಯ-೫ : ಭಕ್ತಿಭಂಡಾರಿ ಬಸವಣ್ಣನವರು



**- ಹರಿದಾಸ ಮ.ನಾ.ಹೆಬ್ಬಾರ**
**ಎಂ.ಎ., ಬಿ.ಎಡ್.**

ಬಿಜಾಪುರ ಜಿಲ್ಲೆಯ ಬಾಗೇವಾಡಿ ಎಂಬ ಅಗ್ರಹಾರದಲ್ಲಿ ಬಸವಣ್ಣನವರು ಜನಿಸಿದುದರಿಂದ ಊರಿಗೆ ಬಸವನ ಬಾಗೇವಾಡಿ ಎಂದೇ ಹೆಸರಾಯಿತು. ಕ್ರಿ.ಶ. 1131 ರಿಂದ 1167 ಇವರ ಜೀವಿತದ ಕಾಲವು. ಕೂಡಲ ಸಂಗಮದಲ್ಲಿನ ಶಿವನ ದೇವಾಲಯದಲ್ಲಿ ಶಿವಪೂಜೆಯಲ್ಲಿ ನಿರತರಾಗಿದ್ದ ಬಸವಣ್ಣನವರು ಶಿವನ ಆದೇಶದಂತೆ ಅಲ್ಲಿಂದ ಹೊರಟ ಕಲ್ಯಾಣದಲ್ಲಿ ರಾಜ್ಯಭಾರ ಮಾಡುತ್ತಿದ್ದ ಕಲಚುರ್ಯ ವಂಶದ ದೊರೆ ಬಿಜ್ಜಳನ ಆಸ್ಥಾನಕ್ಕೆ ಬಂದು ರಾಜನಿಂದ ಭಂಡಾರದ ಅಧಿಕಾರಿಯಾಗಿ ನೇಮಿಸಲ್ಪಟ್ಟರು. ಮುಂದೆ ಭಕ್ತಿ ಮಾರ್ಗವನ್ನು ಹಿಡಿದು ಜನರಿಗೆ ಶಿವತತ್ವಗಳನ್ನು ಬೋಧಿಸಿ 'ಭಕ್ತಿ ಭಂಡಾರಿ' ಎನಿಸಿದರು. ಕಲ್ಯಾಣದಲ್ಲಿ 'ಅನುಭವ ಮಂಟಪ'ವೆಂಬ ಸಂಸ್ಥೆಯನ್ನೇ ಸ್ಥಾಪಿಸಿ ಆ ಮೂಲಕ ಜನರಿಗೆ ಶಿವತತ್ವಗಳನ್ನು ಬೋಧಿಸುತ್ತಾ ದಾಸೋಹವನ್ನೇ ಆರಂಭಿಸಿದರು. ಇವರ ಮನೆಯೇ ಒಂದು ಅನ್ನ ಸತ್ರದಂತಿತ್ತು. ಪ್ರತೀನಿತ್ಯ ನೂರಾರು ಮಂದಿ ಇಲ್ಲಿ ಬಂದು ಶಿವ ಪ್ರಸಾದವನ್ನು ಸ್ವೀಕರಿಸಿ ಹೋಗುತ್ತಿದ್ದರು. ಸಾಮಾಜಿಕ ಆಚಾರಗಳನ್ನೆತ್ತಿಕೊಂಡು 'ಅಂತರ್ಜಾತೀಯ' ವಿವಾಹಗಳಂತಹ ಸುಧಾರಣೆಗಳನ್ನು ತಂದರು. ಇದರಿಂದಾಗಿ ಸಮಾಜದ ಜನರ ವಿರೋಧವನ್ನು ಕಟ್ಟಿಕೊಂಡು ಅರಸನಿಂದ ಶಿಕ್ಷೆಗೂ ಒಳಗಾದರೂ ಜನಸಾಮಾನ್ಯರಿಗೆ ಅರ್ಥವಾಗುವಂತಹ ಸರಳ ಕನ್ನಡ ಭಾಷೆಯಲ್ಲಿ ಗದ್ಯವೂ ಅಲ್ಲದೆ ಪದ್ಯವೂ ಅಲ್ಲದ, ಶಿವಶರಣರುಗಳಲ್ಲಿ ಈ ಮೊದಲೇ ಚಾಲ್ತಿಯಲ್ಲಿದ್ದ 'ವಚನ' ಪ್ರಕಾರದಲ್ಲಿ ಸಾಹಿತ್ಯವನ್ನು ರಚಿಸಿ ಪ್ರಕಟ ಪಡಿಸಿದರು. ಇವರು ಅನುಭವ ಮಂಟಪವೇ ಶರಣರಿಗೆ ಆಶ್ರಯ ಸ್ಥಾನವಾಯಿತು. ಅಲ್ಲಮಪ್ರಭು, ಸಿದ್ಧರಾಮ, ಅಕ್ಕಮಹಾದೇವಿ ಮುಂತಾದವರೆಲ್ಲರೂ ಈ ಅನುಭವ ಮಂಟಪದ ಸದಸ್ಯರಾಗಿದ್ದರು. ಇವರು ರಚಿಸಿದ ವಚನಗಳು ಸಾವಿರಾರು 'ಷಟ್ಸ್ಥಲ ವಚನ', 'ಕಾಲಜ್ಞಾನ ವಚನ', 'ಶಿಖಾರಸ ವಚನ' ಮತ್ತು 'ಮಂತ್ರಗೋಪ್ಯ' ಇವುಗಳು ಇವರು ರಚಿಸಿದ ವಚನಗಳ ಪ್ರಕಾರಗಳು. 'ಹುತ್ತವ ಬಡಿದರೆ ಹಾವು ಸಾಯಬಲ್ಲುದೇ?', 'ಮರ್ತ್ಯ ಲೋಕವೆಂಬುದು ಕರ್ತಾರನ ಕಮ್ಮಟವಯ್ಯ'; 'ಸತ್ಯವ ನುಡಿವುದೇ ಸ್ವರ್ಗಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ'; 'ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ' ಮುಂತಾಗಿ ಹಲವು ವಿಧದಲ್ಲಿ ಜನರಿಗೆ ಬೋಧನೆಯನ್ನು ವಚನಗಳ ಮೂಲಕ ನೀಡಿದವರು ಬಸವಣ್ಣನವರು. ಇವರಿಗಿಂತಲೂ ಮೊದಲು ವೀರಶೈವರಲ್ಲಿ ವಚನಕಾರರು/ಕಾರ್ತಿಯರು ಎಷ್ಟೋ ಮಂದಿ ಆಗಿ ಹೋಗಿದ್ದರೂ ಬಸವಣ್ಣನವರೇ ವೀರಶೈವ ಮತೋದ್ಧಾರಕರು ಎಂಬ ಹೆಸರಿಗೆ ಪಾತ್ರರಾದರು. ಇವರ ಅನುಭವ ಮಂಟಪವಿರುವ ಸ್ಥಳವೇ ಮುಂದೆ 'ಬಸವ ಕಲ್ಯಾಣ' ಎಂಬ ಹೆಸರನ್ನು ಪಡೆಯಿತು. ನೀರಾಂಬಿಕೆ ಮತ್ತು ಗಂಗಾಂಬಿಕೆ ಎಂಬವರು ಇವರ ಮಡದಿಯರು. ಇವರು ತಮ್ಮ ಮನೆಯಲ್ಲಿಯೇ ಪ್ರತೀನಿತ್ಯ ಅನ್ನದಾಸೋಹವನ್ನು ನಡೆಸುತ್ತಿದ್ದು ನೂರಾರು ಮಂದಿಗಳು ಇಲ್ಲಿಗೆ ಬಂದು 'ಶಿವ ಪ್ರಸಾದ'ವನ್ನು ಸೇವಿಸಿ ಹೋಗುತ್ತಿದ್ದರು. 'ಕಾಯಕವೇ ಕೈಲಾಸ'ವೆಂಬ ತತ್ವವನ್ನು ಇವರು ಪ್ರಚುರ ಪಡಿಸಿದರು. ಎಷ್ಟೋ ಮಂದಿ ಶಿವಶರಣರು, ಸಮಾಜ ಸುಧಾರಕರು ಇವರ ಬೋಧನೆಯಿಂದ ಸ್ಫೂರ್ತಿ ಪಡೆದು ತಾವೂ ಕೂಡ ಬೋಧನೆಯನ್ನು ತೊಡಗಿದರು. ಇವರ ಆರಾಧ್ಯ ದೈವವಾಗಿದ್ದ 'ಕೂಡಲ ಸಂಗಮ' ಎಂಬ ಅಂಕಿತವನ್ನು ತನ್ನ ಪ್ರತಿಯೊಂದು ವಚನದ ಕೊನೆಯಲ್ಲಿ ಸೇರಿಸಿದ್ದಾರೆ. ಕೊನೆಗಾಲದಲ್ಲಿ ಅನಿವಾರ್ಯವಾಗಿ ಕೂಡಲ ಸಂಗಮಕ್ಕೆ ಬಂದು ಅಲ್ಲಿಯೇ ಕೆಲಕಾಲವಿದ್ದು ಆರಾಧ್ಯವಾದ ಕೂಡಲ ಸಂಗಮನಲ್ಲಿ ಲೀನರಾದರು. ತನ್ನ ಕಾಲದ ಕ್ರಾಂತಿಕಾರಿ ಎನಿಸಿದರು.

(ಮುಂದುವರಿಯುವುದು)




RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS


# ಶ್ರೀನಿವಾಸ ದೇವಸ್ಥಾನ-ಪ್ರತಿಷ್ಠಾ ಮಹೋತ್ಸವ

ತಾ.17-02-2013 ನೇ ರವಿವಾರದಂದು ಕಡಬ ತಲೇಕಿ ಶ್ರೀ ಶ್ರೀನಿವಾಸ ದೇವಸ್ಥಾನದಲ್ಲಿ ಕಳೆದ ವರ್ಷ ಬ್ರಹ್ಮಕಲಶದ ಬಳಿಕ ಈ ವರ್ಷ ಶ್ರೀ ಶೃಂಗೇರಿ ಪೀಠದ ಮಹಾ ಜಗದ್ಗುರುಗಳವರ ದಿವ್ಯ ಹಸ್ತದಿಂದ ಪುನಃ ಪ್ರತಿಷ್ಠಾಪಿಸಲ್ಪಟ್ಟ ಶ್ರೀ ಶ್ರೀನಿವಾಸ ದೇವರು ಹಾಗೂ ವಿಶ್ವನಾಥ ದೇವರಿಗೆ ಪ್ರತಿಷ್ಠಾ ವಾರ್ಷಿಕೋತ್ಸವವು ಬ್ರಹ್ಮ ಶ್ರೀ ವಾಗೀಶ ತಂತ್ರಿಗಳ ನೇತೃತ್ವದಲ್ಲಿ ಸ್ವಸ್ತಿ। ಶ್ರೀ ನಂದನ ನಾಮ ಸಂವತ್ಸರದ ಮಾಘ ಮಾಸ 28 ಶುಕ್ಲ ಪಕ್ಷ 3 ಸಲುವ, ರಥ ಸಪ್ತಮಿ ದಿನ ವಿಜೃಂಭಣೆಯಿಂದ ನೆರವೇರಿತು. ಬೆಳಿಗ್ಗೆ ಸುಪ್ರಭಾತ, ಮಹಾಗಣಪತಿಗೆ 12 ಕಾಯಿ ಮಹಾಗಣಪತಿ ಹವನ, ಶ್ರೀ ವಿಶ್ವನಾಥ ಸ್ವಾಮಿಗೆ ರುದ್ರಾಭಿಷೇಕ ಪವಮಾನಭಿಷೇಕ, ನಾಗ ತಂಬಿಲ, ನವಕಾಭಿಷೇಕ ಮತ್ತು ಮಹಾಪೂಜೆ ನೆರವೇರಿತು. ಮಧ್ಯಾಹ್ನ ಹಾಗೂ ರಾತ್ರಿ ಭಕ್ತಾಭಿಮಾನಿಗಳಿಗೆ ಪ್ರಸಾದ ಭೋಜನ ವಿತರಿಸಲಾಯಿತು. ಸಾಯಂಕಾಲ 6 ಘಂಟೆಯಿಂದ ಭಜನೆ ಹಾಗೂ ಊರ ಮತ್ತು ನಮ್ಮ ಸಮಾಜದ ಪುಟಾಣಿಗಳಿಂದ ಹಾಡು, ನೃತ್ಯ ಹಾಗೂ ವಿಜ್ಞಾನ ಸಂಪನ್ಮೂಲ ವ್ಯಕ್ತಿಯಾದ ಶ್ರೀಮಾನ್ ಚಂದ್ರಶೇಖರ್ ರಾವ್‌ರವರ ಮಿಮಿಕ್ರಿ ಕಾರ್ಯಕ್ರಮ ಎಲ್ಲರನ್ನು ಮನರಂಜಿಸಿತು. ಈ ಬಳಿಕ ಕಾಸರಗೋಡು ಕೊಲ್ಲಂಗಾನ ಮೇಳದವರಿಂದ ಶ್ರೀದೇವಿ ಲಲಿತೋಪಾಖ್ಯಾನ ಯಕ್ಷಗಾನ ಬಯಲಾಟ ಬೆಳಗಿನವರೆಗೆ ಜರಗಿತು.

ಕಡಬ ಕುಂಭಾಟ್ ಭರತೇಶ ಶರ್ಮ ಮುಂಬಯಿ ಇವರು ಭಾಗವಹಿಸಿದ ಎಲ್ಲಾ ಪುಟಾಣಿಗಳಿಗೆ ಬಹುಮಾನ ವಿತರಿಸಿದರು. ಈ ವಾರ್ಷಿಕೋತ್ಸವದ ಪ್ರಾಯೋಜಕರಾಗಿ ಶ್ರೀಮತಿ ಕನಕವಲ್ಲಿ ಮತ್ತು ಶ್ರೀ ಹರ್ಷಕುಮಾರ್ ಕೇದಗೆ, ಪ್ರಮೋದ್ ಆಟೋಮೊಬೈಲ್ಸ್ ಮಂಗಳೂರು ಇವರು ಸಹಕರಿಸಿದರು.

ವರದಿ : **ಕು। ಪ್ರೀತಿಕಾ ಹರ್ಷ ಕುಮಾರ್**


Buying and selling shares as easy as checking your emails

Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)

# ಮನಸ್ಸನ್ನು ಕಾಡಿದ ಸೈತಾನ (ನೈಜ ಘಟನೆ)

ಲೇಖನ : **ಶ್ರೀಮತಿ ಸೀತಾದೇವಿ ಭಾಸ್ಕರ ರಾವ್**
ನಿವೃತ್ತ ಶಿಕ್ಷಕಿ, ಪಡುಬಿದ್ರಿ.

ಮೂವತ್ತು ವರ್ಷಗಳ ನನ್ನ ವೃತ್ತಿ ಜೀವನದಲ್ಲಿ ನಡೆದ ಒಂದು ನಿಜ ಘಟನೆಯನ್ನು ತಮ್ಮ ಮುಂದಿಡುತ್ತಿದ್ದೇನೆ. ನಾನು ಅಧ್ಯಾಪಿಕೆಯಾಗಿ ಕಾರ್ಯ ನಿರ್ವಹಿಸಿದ್ದು ನಮ್ಮೂರಿನ ಮುಸ್ಲಿಂ ಸಮುದಾಯಕ್ಕೆ ಸೇರಿದ ಅನುದಾನಿತ ಖಾಸಗಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ. ಅಂದು ಬೆಳಿಗ್ಗೆ ಗಂಟೆ 9 ಕ್ಕೆ ಎಂದಿನಂತೆ ನಾನು ಶಾಲೆಯನ್ನು ತಲುಪಿದೆ. ಅಷ್ಟರಲ್ಲಿ ಶಾಲೆಯ ಮಕ್ಕಳೆಲ್ಲಾ ಕಿರುಚಾಡುತ್ತಾ ಶೌಚಾಲಯದ ಬಳಿ ಗುಂಪುಗೂಡಿದ್ದರು. ಗಾಬರಿಗೊಂಡ ನಾನು ಲಗು ಬಗೆಯಿಂದ ಅಲ್ಲಿಗೆ ಹೋಗಿ ಏನಾಯಿತೆಂದು ವಿಚಾರಿಸಿದಾಗ ನನಗೂ ಕೂಡಲೇ ಏನು ಮಾಡಬೇಕೆಂದು ತೋಚಲಿಲ್ಲ. ಕಾರಣ ನಮ್ಮ ಶಾಲೆಯಲ್ಲಿ ಐದನೇ ತರಗತಿಯಲ್ಲಿ ಓದುತ್ತಿದ್ದ ನನ್ನ ಮೆಚ್ಚಿನ ವಿದ್ಯಾರ್ಥಿನಿ ಆಯಿಷಾ ಇದ್ದಕ್ಕಿದ್ದಂತೆ ಶೌಚಾಲಯದ ಒಂದು ಮೂಲೆಯಲ್ಲಿ ಕುಳಿತು ತನ್ನ ಸಮವಸ್ತ್ರದ ತುಂಬಾ ಕಲ್ಲುಗಳನ್ನು ತುಂಬಿ ಕೊಂಡು ಎದುರು ಬಂದವರಿಗೆಲ್ಲಾ ನನ್ನ ಬಳಿ ಬರಬೇಡಿ ಬಂದರೆ ನಾನು ನಿಮ್ಮನ್ನು ಕಲ್ಲಿನಿಂದ ಹೊಡೆದು ಸಾಯಿಸುತ್ತೇನೆ ಎಂದು ಕಲ್ಲುಗಳನ್ನು ಎದುರು ಬಂದವರ ಮೇಲೆಲ್ಲಾ ಬಿಸಾಕಿ ಹೆದರಿಸುತ್ತಿದ್ದಳು. ಮತ್ತೊಮ್ಮೆ ನನಗೇನೂ ಮಾಡಬೇಡಿ ನನ್ನನ್ನು ಬಿಟ್ಟು ಬಿಡಿ ಒಂದು ದೀನಳಾಗಿ ಅಳುತ್ತಿದ್ದಳು. ಮಕ್ಕಳನ್ನು ಚದುರಿಸಿ ನಾನು ಆಕೆಯನ್ನು ಪ್ರೀತಿಯಿಂದ ರಮಿಸಿ ಆಕೆಯಲ್ಲಿ ಧೈರ್ಯ ತುಂಬಿ ನನ್ನ ಆಫೀಸು ಕೋಣೆಗೆ ಕರೆದು ಬಂದೆ. ದಾರಿಯುದ್ದಕ್ಕೂ ಆಕೆ ನಾನು ಎಲ್ಲಿಗೂ ಬರೋಲ್ಲ ಅವರೆಲ್ಲಾ ನನ್ನನ್ನು ಹೊಡೆಯುತ್ತಾರೆ. ಟೀಚರ್ ಅವರು ನನ್ನನ್ನು ಸಾಯಿಸಿಯೇ ಬಿಡುತ್ತಾರೆ. ನನ್ನನ್ನು ಬಿಟ್ಟುಬಿಡಿ ಎಂದು ನನ್ನಿಂದ ತಪ್ಪಿಸಿಕೊಳ್ಳಲು ಯತ್ನಿಸುತ್ತಿದ್ದಳು. ಕೊನೆಗೂ ಆಕೆಯನ್ನು ಸಮಾಧಾನ ಪಡಿಸಿ ತರಗತಿಗೆ ಕಳಹಿಸಿದೆ. ಇದು ಒಂದು ಘಟನೆಯಾದರೆ ಕೆಲವೊಮ್ಮೆ ಆಕೆ ತರಗತಿಯಲ್ಲಿ ಇದ್ದಕ್ಕಿದ್ದಂತೆ ಎದೆನೋವು ಎಂದು ಜೋರಾಗಿ ಅಳುವುದು. ದೀರ್ಘವಾಗಿ ಏದುಸಿರು ಬಿಡುವುದು. ಕೈಕಾಲು ಸೆಟೆದು ಕೊಂಡು ಸ್ಮೃತಿ ತಪ್ಪಿ ಬೀಳುವುದು ಎಲ್ಲಾ ಆರಂಭವಾಯಿತು. ಎಷ್ಟೋ ಬಾರಿ ಮಗುವಿನ ಪೋಷಕರನ್ನು ಶಾಲೆಗೆ ತರಿಸಿ ಆಕೆಯನ್ನು ಮನೆಗೆ ಕಳುಹಿಸಿ ಆಯಿತು. ನಾನೇ ಶಾಲೆಯ ಬಳಿ ಇರುವ ಆಸ್ಪತ್ರೆಯ ವೈದ್ಯರಿಂದ ಚಿಕಿತ್ಸೆ ಕೊಡಲು ಯತ್ನಿಸಿದೆ. ಯಾವುದೇ ಫಲಕಾರಿಯಾಗಲಿಲ್ಲ. ಅಲ್ಲದೆ ಆಕೆಯ ಪೋಷಕರೂ ಹೃದಯ ತಜ್ಞರಿಂದ ಹೃದಯ ಸಂಬಂಧಿ ಕಾಯಿಲೆ ಬಗ್ಗೆ ತಪಾಸಣೆ ನಡೆಸಿಯೂ ಆಯಿತು. ಇದಾವುದೂ ಫಲಕಾರಿಯಾಗದೆ ಮೇಲಿನ ಘಟನೆಗಳು ಪುನರಾವರ್ತನೆ ಆಗುತ್ತಲೇ ಇರುವಾಗ ಮಂತ್ರವಾದಿಗಳ ಭೇಟಿಯೂ ಮುಗಿದು ಮನೆಯವರೆಲ್ಲಾ ಕೈಚೆಲ್ಲಿ ಕುಳಿತರು. ಆದರೆ ನಾನು ಮಾತ್ರ ಓರ್ವ ಅಧ್ಯಾಪಿಕೆಯಾಗಿ ಒಂದು ಹೆಣ್ಣು ಮಗುವಿನ ಭವಿಷ್ಯ ನನ್ನ ಕಣ್ಣೆದುರು ನಾಶವಾಗುತ್ತಿರುವುದನ್ನು ನೋಡಲಾರದೆ ಹೇಗಾದರೂ ಅದನ್ನು ಸರಿಪಡಿಸಬೇಕೆಂದು ನಿರ್ಧರಿಸಿದೆ. ಮಗು ಏನೋ ಮಾನಸಿಕ ತೊಂದರೆಯಿಂದ ಬಳಲುತ್ತಿರಬಹುದು ಎಂದು ಯೋಚಿಸಿದ ನಾನು ಆಕೆಯ ಕೌಟುಂಬಿಕ ಹಿನ್ನಲೆಯನ್ನು ಪರಿಸರದ ಮಕ್ಕಳಿಂದ ಅರಿತುಕೊಂಡೆ. ಆಯಿಷಾಳ ಅಪ್ಪ ಸೌದಿ ಅರೇಬಿಯಾದಲ್ಲಿ ನೌಕರಿಯಲ್ಲಿದ್ದು ಆಕೆ ಮೂರು ವರ್ಷದ ಮಗುವಾಗಿದ್ದಾಗಲೇ ಅಲ್ಲಿಯೇ ಅಫಘಾತ ಒಂದರಲ್ಲಿ ತೀರಿಕೊಂಡಿದ್ದರು. ಗಂಡನ ನಿಧನದ ಬಳಿಕ ಆಕೆಯ ಅಮ್ಮ ತನ್ನ ಎರಡು ಪುಟ್ಟ ಹೆಣ್ಣು ಮಕ್ಕಳೊಡನೆ ಗಂಡನ ಮನೆಯಲ್ಲಿಯೇ ಇದ್ದು ಬೀಡಿಕಟ್ಟಿಕೊಂಡು ಅತ್ತೆ ಮಾವ ಹಾಗೂ ಮೈದುನರ ಸಹಾಯದಿಂದ ಜೀವನ ಸಾಗಿಸುತ್ತಿದ್ದಳು. ಗಂಡನ ನಿಧನದ ಬಳಿಕ ದೊರೆತ ಪರಿಹಾರ ಧನವನ್ನು ತನ್ನ ಮಕ್ಕಳಿಬ್ಬರ ಹೆಸರಿನಲ್ಲಿ ಅವರ ಮುಂದಿನ ಭವಿಷ್ಯಕ್ಕಾಗಿ ಬ್ಯಾಂಕಿನಲ್ಲಿ ಠೇವಣಿಯಾಗಿರಿಸಿದ್ದಳು. ಇತ್ತೀಚೆಗೆ ಆಯಿಷಾಳ ಅಜ್ಜ-ಅಜ್ಜಿ (ಅಮ್ಮನ ಅಪ್ಪ ಮತ್ತು ಅಮ್ಮ) ತಮ್ಮ ಮಗಳ ಭವಿಷ್ಯದ ಬಗ್ಗೆ ಚಿಂತಿಸಿ ಆಕೆಗೆ ಮರು ಮದುವೆ ಮಾಡುವ ಸನ್ನಾಹದಲ್ಲಿದ್ದರು. ಅವರ ಸಮುದಾಯದಲ್ಲಿ ಅದು ಕಷ್ಟವೇನೂ ಅಲ್ಲ ಎಂಬುದಾಗಿ ತಿಳಿದು ಬಂತು. ಹೀಗಿರುತ್ತಾ ಒಂದು ಬಾರಿ ಆಯಿಷಾಳನ್ನು ನನ್ನ ಅಫೀಸು ಕೋಣೆಗೆ ಕರೆದು ಆಕೆಯನ್ನು ರಮಿಸಿ ಆಕೆಯ ಭಯ ಮತ್ತು ಅಳುವಿನ ಕಾರಣ ಕೇಳಿದಾಗ ನನಗೇ ಅಚ್ಚರಿಯಾಯಿತು. ಮೊದಲಾಗಿ ಆಕೆಗೆ ತನ್ನ ಅಪ್ಪನನ್ನು ಕಾಣುವ ಹಂಬಲ. ಆಕೆ ಎಷ್ಟು ಬಾರಿ ಮನೆಯಲ್ಲಿ ಬೇಡಿದರೂ ಅವಳ ಅಪ್ಪನ ಭಾವ ಚಿತ್ರವನ್ನು ತೋರಿಸಿರಲಿಲ್ಲ. ಟೀಚರ್ ನನಗೆ ನನ್ನ ಅಪ್ಪ'ನ್ನು ನೋಡಬೇಕು ನೀವಾದರೂ ನನ್ನ ಅಮ್ಮ ಮತ್ತು ಅಜ್ಜನೊಡನೆ ತೋರಿಸಲು ಹೇಳಿ ಎಂದು ಅಂಗಲಾಚಿದಾಗ ತೋರಿಸುವ ಭರವಸೆಯನ್ನು ಕೊಟ್ಟೆ. ಇನ್ನು ಹೆದರಿಕೆಗೆ ಕಾರಣ ಇಷ್ಟೆ. ಒಂದೆಡೆ ಆಕೆಯ ಅಮ್ಮನ ಮರು ಮದುವೆಯ ವಿಚಾರ ಮನೆಯಲ್ಲಿ ಆಕೆಯ ಎದುರೇ ನಡೆಯುತ್ತಿದ್ದರೆ, ಇನ್ನೊಂದೆಡೆ ನೆರೆಮನೆಯ ಅಧಿಕ ಪ್ರಸಂಗಿ ಹೆಂಗಸರು ನಿನ್ನ ಅಮ್ಮ ಇನ್ನೊಂದು ಮದುವೆ ಮಾಡಿ ಕೊಳ್ಳುತ್ತಿದ್ದಾರೆ. ನಿನಗೆ ಹೊಸ ಅಪ್ಪ ಬರುತ್ತಾರೆ. ಮತ್ತೆ ನಿಮಗಿದೆ ಗ್ರಹಚಾರ. ನಿನಗೂ ನಿನ್ನ ಅಕ್ಕನಿಗೂ ಚೆನ್ನಾಗಿ ಹೊಡೆಯುತ್ತಾನೆ. ನಿಮ್ಮಿಬ್ಬರನ್ನು ಬೇರೆ ಕೋಣೆಯಲ್ಲಿ ಮಲಗಿಸುತ್ತಾನೆ. ಊಟ ಕೊಡುವುದಿಲ್ಲ. ಅವನಿಗೆ ಹುಟ್ಟಿದ ಮಕ್ಕಳನ್ನು ಮಾತ್ರ ಮುದ್ದು ಮಾಡುತ್ತಾನೆ ಎಂದೆಲ್ಲಾ ಮುಂದೆ ಬರಲಿರುವ ಅಪ್ಪನನ್ನು ಸೈತಾನನ ರೂಪದಲ್ಲಿ ಆಕೆಯ ಮನಸ್ಸಿನಲ್ಲಿ ತುಂಬಿ ಬಿಡುತ್ತಿದ್ದರು. ಅದಕ್ಕೆ ಸರಿಯಾಗಿ ಎರಡು ವರ್ಷಗಳ ಹಿಂದೆ ಮದುವೆಯಾದ ಆಕೆಯ ಮುದ್ದಿನ ಚಿಕ್ಕಪ್ಪ ಆಕೆಯನ್ನು ಕಡೆಗಣಿಸಿ ತನ್ನ ಹೆಂಡತಿ ಮಗುವನ್ನು ಮುದ್ದು ಮಾಡುತ್ತಿದ್ದುದು ಇನ್ನೊಂದು ಕಾರಣವಾಗಿತ್ತು. ಈ ಎಲ್ಲಾ ಕಾರಣಗಳಿಂದ ಭಯಭೀತಳಾದ ಆಯಿಷಾ ಮುಂದೆ ಬರಲಿರುವ ಅಪ್ಪನನ್ನು ಸೈತಾನನ ರೂಪದಲ್ಲಿ ಕಲ್ಪಿಸಿಕೊಂಡು ಎಲ್ಲರಲ್ಲೂ ಅವನನ್ನು ಕಂಡು ಕಲ್ಲೆಸೆಯುತ್ತಿದ್ದಳು. ಯಾವ ಮನೋ ವೈದ್ಯರ ನೆರವಿಲ್ಲದೆ ಆಕೆಯ ಸಮಸ್ಯೆಯನ್ನು ಬಗೆ ಹರಿಸಲು ನಿರ್ಧರಿಸಿದೆ. ಮರುದಿನ ಆಯಿಷಾಳ ಅಮ್ಮ, ಅಜ್ಜ ಮತ್ತು ಚಿಕ್ಕಪ್ಪ ಮೂವರನ್ನು ಶಾಲೆಗೆ ಬರಹೇಳಿದೆ. ಬರುವಾಗ ಆಕೆಯ ಅಪ್ಪನ ಭಾವ ಚಿತ್ರ ಒಂದನ್ನು ತರಲು ತಿಳಿಸಿದೆ. ನನ್ನಲ್ಲಿ ಪೂರ್ಣ ವಿಶ್ವಾಸವಿರಿಸಿ ಬಂದ ಅವರೊಡನೆ ಮಗುವಿನ ಸಮಸ್ಯೆ ಬಗ್ಗೆ ತಿಳಿಸಿದಾಗ ಅವರ ಕಣ್ಣಲ್ಲೂ ನೀರೂರಿತು. ಅಜ್ಜನ ಬಳಿ ಇದ್ದ ಪಾಸ್ ಪೋರ್ಟ್‌ನಲ್ಲಿ ಅಪ್ಪನ ಭಾವಚಿತ್ರವನ್ನು ನೋಡಿ ಕೂಡಲೇ ಕಸಿದುಕೊಂಡ ಆಯಿಷಾ ಅದನ್ನು ಎದೆಗಾನಿಸಿಕೊಂಡು ನನ್ನ ಅಬ್ಬಾ ಅಬ್ಬಾ (ಅಬ್ಬಾ ಎಂದರೆ ಅಪ್ಪ) ಎಂದು ಜೋರಾಗಿ ಅತ್ತಾಗ ಎಂಥವರ ಮನಸ್ಸು ಕರಗುವಂತಿತ್ತು. ಆಯಿಷಾಳ ತಾಯಿಯೊಡನೆ ಮರು ಮದುವೆಯಿಂದ ಮಗುವಿನ ಮೇಲಾಗುವ ಕಠಿಣ ಪರಿಣಾಮ ವನ್ನು ಮನದಟ್ಟುಪಡಿಸಿ ಆ ನಿರ್ಧಾರವನ್ನು ಬಿಡುವಂತೆ ವಿನಂತಿಸಿದೆ. ಪಶ್ಚಾತ್ತಾಪದಿಂದ ಕುಗ್ಗಿಹೋದ ಆಕೆ ಭರವಸೆಯನ್ನಿತ್ತಳು. ಒಮ್ಮೆ ತಾಯಿ ಮಗಳಿಬ್ಬರೂ ಜೋರಾಗಿ ಅತ್ತು ತಮ್ಮನ್ನೆಲ್ಲಾ ತಾವೇ ಸಮಾಧಾನ ಪಟ್ಟುಕೊಂಡು ನೆಮ್ಮದಿಯ ಉಸಿರನ್ನು ಬಿಟ್ಟು ಮನೆಗೆ ತೆರಳಿದರು. ಅಂದು ಆ ತಾಯಿ ಮಾಡಿದ ತ್ಯಾಗದಿಂದ ಇಂದು ಆಯಿಷಾ ಪಿ.ಯು.ಸಿ ವರೆಗೆ ವ್ಯಾಸಂಗ ಮಾಡಿ ಗಂಡನೊಡನೆ ನೆಮ್ಮದಿಯ ಜೀವನ ನಡೆಸುತ್ತಿರುವ ವಿಚಾರ ಆಕೆಯ ಸಹೋದರಿಯಿಂದ ತಿಳಿದು ಬಂತು. ಮಕ್ಕಳ ಮನಸ್ಸಿನ ಸೂಕ್ಷ್ಮತೆಯನ್ನು ಅರಿಯದ ಜನರಿಂದಾಗುವ ಕೆಲವೊಂದು ತೊಂದರೆಗಳಿಗೆ ಇದು ಒಂದು ಉತ್ತಮ ಉದಾಹರಣೆ.

## ನಿಧನ

### ಶಿರಿಯ ರಾಧಾಕೃಷ್ಣ ಜೋಶಿ



ಕಾರ್ಕಳ ಶ್ರೀ ಭುವನೇಂದ್ರ ಕಾಲೇಜಿನ ನಿವೃತ್ತ ಪ್ರೊಫೆಸರ್ ಹಾಗೂ ಮೂಡುಬಿದಿರೆಯ ಶ್ರೀ ಧವಳಾ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಶ್ರೀ ಶಿರಿಯ ರಾಧಾಕೃಷ್ಣ ಜೋಶಿ (86 ವರ್ಷ) ಯವರು ಫೆಬ್ರವರಿ 24ರಂದು ದೈವಾಧೀನ ರಾದರು. ಪುತ್ತೂರಿನ ನೆಹರು ನಗರದಲ್ಲಿ ವಿಶ್ರಾಂತ ಜೀವನ ನಡೆಸುತ್ತಿದ್ದ ಇವರು ಜನಾನುರಾಗಿಯಾಗಿದ್ದು, ಪತ್ನಿ ಮಹಾಲಕ್ಷ್ಮಿ ಜೋಶಿ, ಪುತ್ರ ಪುತ್ತೂರಿನ ಖ್ಯಾತ ಅರಿವಳಿಕೆ ತಜ್ಞ ಡಾ। ಎಸ್. ಎಸ್. ಜೋಶಿ, ಮೂವರು ಪುತ್ರಿಯರನ್ನು ಹಾಗೂ ಅಪಾರ ಬಂಧುವರ್ಗ ವನ್ನು ಅಗಲಿದ್ದಾರೆ.

★★★ ★★★

### ಶಂಕರ ರಾವ್, ಕೊಪ್ಪಳ


ಕೊಪ್ಪಳದ ಸಪ್ತಗಿರಿ ಕಾಲನಿಯಲ್ಲಿ ವಾಸ್ತವ್ಯ ದಲ್ಲಿದ್ದ ಮೂಲತಃ ಉಡುಪಿ ತಾಲೂಕು ಕಟಪಾಡಿ ಸಮೀಪದ ಚೊಕ್ಕಾಡಿಯವರಾದ ಶಂಕರ ರಾವ್ ಕೊಪ್ಪಳ (ಮಟ್ಟಾರು ಶ್ರೀ ರಾಮಕೃಷ್ಣ ರಾಯರ ಸಹೋದರ) ಇವರು 18-02-2013ರಂದು ಹೃದಯಾಘಾತ ದಿಂದ ಕೊಪ್ಪಳದ ತಮ್ಮ ಸ್ವಗೃಹ ಐಸಿರಿಯಲ್ಲಿ ನಿಧನ ಹೊಂದಿದರು. (68 ವರ್ಷ) ದಿವಂಗತರು ಪತ್ನಿ ಕುಮುದಾಕ್ಷಿ ಎಸ್. ರಾವ್, ಓರ್ವ ಪುತ್ರ ರಾಘವೇಂದ್ರ, ಇಬ್ಬರು ಪುತ್ರಿ ಯರು ಹಾಗೂ ಅಪಾರ ಬಂಧು ಬಾಂಧವ ರನ್ನು ಅಗಲಿರುತ್ತಾರೆ.

★★★ ★★★

### ಚಂದ್ರಮ್ಮ

ತಂತ್ರಾಡಿ ದಿ। ಮಹಾಬಲೇಶ್ವರ ಶ್ಯಾನು ಭಾಗ್ ಅವರ ಪತ್ನಿ ಶ್ರೀಮತಿ ಚಂದ್ರಮ್ಮ ನವರು ಅಲ್ಪಕಾಲದ ಅಸೌಖ್ಯದಿಂದ ತನ್ನ 98ನೇ ವರ್ಷ ವಯಸ್ಸಿನಲ್ಲಿ ತಾ.02-03-2013ರಂದು ತನ್ನ ಪುತ್ರ ಟೆಲಿಕಾಮ್ಸ್‌ನ ನಿವೃತ್ತ ಸಹಾಯಕ ಮಹಾಪ್ರಬಂಧಕ ಹಾಗೂ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ನಿರ್ದೇಶಕರೂ ಆದ ಎಸ್.ಎಮ್.ರಾಯರ ಕುಂಜಿಬೆಟ್ಟು ವಿ.ಪಿ.ನಗರದ ಮನೆಯಲ್ಲಿ ನಿಧನರಾದರು. ಅವರು ಎಸ್.ಎಮ್.ರಾವ್ ಅಲ್ಲದೇ ಪುತ್ರಿ ನಾಗವೇಣಿ ವಾಸುದೇವರಾವ್ ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ.

# ಕನ್ನಡಿಗನ ಕನಸಿನ ತಾಯಿ ನಾಡು



**ಕಬ್ಬಿನಾಲೆ ಸುಬ್ರಾಯ ಹೆಬ್ಬಾರ್ ಶ್ರೀಜಿತ್**
**(ಕ.ಸು.ಶ್ರೀ)**

ಕನ್ನಡಿಗನಿಗೆ ತನ್ನ ತಾಯಿನಾಡಿನ ಬಗ್ಗೆ ಅಪಾರ ಭಕ್ತಿ ಇರುತದೆ. ಇದು ಆತನ ರಕ್ತದಲ್ಲೇ ಬೆರೆತಿರುವ ಶಕ್ತಿಯಾಗಿದೆ. ಕನ್ನಡಿಗ ತನ್ನ ತಾಯಿನಾಡಿಗಾಗಿ ತನ್ನ ಪ್ರಾಣವನ್ನು ತ್ಯಜಿಸಲು ಹಿಂಜರಿಯಲಾರನು. ಇದುವೆ ಆತನ ನಿಜವಾದ ದೇಶಪ್ರೇಮ. ಈ ನೆಲೆಯಲ್ಲಿ ಈ ನಾಡಿನಲ್ಲಿ ಜನಿಸಿರುವ ನಾವೇ ಧನ್ಯರು. ಭಾರತ ದೇಶದಲ್ಲಿ ಕನ್ನಡ ನಾಡಿಗೆ ವಿಶಿಷ್ಟ ಸ್ಥಾನವಿದೆ. ಈ ಗರಿಮೆಯಡಿ ಬೆಳೆಯುತ್ತಿರುವ ನಾವೇ ಶ್ರೇಷ್ಠರು. ನಾವು ಈ ನಾಡಿನಲ್ಲಿ ಜನಿಸಿಯಾಗಿದೆ. ಈಗ ಈ ನಮ್ಮ ತಾಯಿ ನಾಡಿಗೆ ನಾವು ಯಾವುದೇ ರೀತಿಯ ಒಳ್ಳೆಯ ಕೆಲಸವನ್ನು ಮಾಡಿ, ನಮ್ಮ ತಾಯಿಯನ್ನು ಉಳಿಸಬೇಕಾಗಿದೆ. ಇದು ಪ್ರತಿಯೊಬ್ಬರ ಕರ್ತವ್ಯವಾಗಿದೆ.

ತ್ರೇತಾಯುಗದಲಿ ಶ್ರೀ ರಾಮ ಪುರುಷೋತ್ತಮ. ಉನ್ನತಿಗೆ ಹೆಸರಾದ ಆತ ತನ್ನ ಶ್ರೀಮಂತ ಜೀವನ, ತ್ಯಾಗ, ದೇಶಪ್ರೇಮ ಇವುಗಳಿಂದ ಆ ಯುಗದಲ್ಲಿ ಆಮರನಾಗಿ ಉಳಿದ. ಆದರೆ ಇದು ಕಲಿಯುಗ. ಅಂದಿನ ರಾಮ ಇಂದು ಇದ್ದಾನೋ? ತಿಳಿಯದು. ಆದರೆ ಶ್ರೀ ರಾಮನಾಗಲು ಈ ಯುಗದಲ್ಲೂ ಸಾಧ್ಯವಿದೆ. ಈ ನಾಡಿಗೆ ಬೇಕಾದದ್ದು ಯುವ ಶಕ್ತಿ. ಈ ಯುವಶಕ್ತಿಯಲ್ಲಿ ಒಳ್ಳೆಯ ನುಡಿಗಳನ್ನು ಭಿತ್ತನೆ ಮಾಡಿ, ಆ ಭಿತ್ತನೆಯಿಂದ ಕೃಷಿಯನ್ನು ಆರಂಭಿಸಿ ಸಾಧನೆಯೆಂಬ ಫಲವನ್ನು ಪಡೆಯಬೇಕು. ಈ ಕೆಲಸವನ್ನು ಯಾರು ಮಾಡುತ್ತಾರೋ ಆತನು ನಿಜವಾಗಿ ಶ್ರೀರಾಮನು ಆಗುತ್ತಾನೆ.

ಪ್ರತಿಯೊಂದು ವಿಷಯಕ್ಕೂ ತನ್ನದೇ ಆದ ಅರ್ಥವಿರುತ್ತದೆ. ಆದೇ ರೀತಿ ನಮ್ಮ ಜೀವನದ ಹಿಂದೆ. ಈ ನಾಡಿಗೆ ನಮ್ಮ ಅವಶ್ಯಕತೆ ಇದೆ ಎಂದು ತಿಳಿಯಬೇಕು. ಈ ರೀತಿ ನಮ್ಮ ತಾಯಿ ನಾಡಿಗೆ ನಮ್ಮ ಕರ್ತವ್ಯವನ್ನು ತೀರಿಸಲೇಬೇಕು. ಇದಕ್ಕೆ ದಾರಿಗಳು ಹಲವು. ಈ ಸಮಯದಲ್ಲಿ ನಾವು ನೂರಾರು ಸಮಸ್ಯೆಗಳನ್ನು ಎದುರಿಸುತ್ತಾ ಇದ್ದೇವೆ. ಇದಕ್ಕೆ ಪರಿಹಾರ ಕಂಡುಹಿಡಿದು, ಅದನ್ನು ಬಗೆ ಹರಿಸಬೇಕಾಗಿದೆ. ಇದಕ್ಕೆ ಮಾರ್ಗ ಯುವ ಶಕಿಯ ಕೈಯಲ್ಲಿ ಇದೆ. ಯುವ ಶಕ್ತಿ ಈ ಸಮಸ್ಯೆಗಳನ್ನು ನಿರ್ಮೂಲನೆ ಮಾಡಿದಾಗ ಈ ನಾಡು ಅಂದಿನ ರಾಮ ರಾಜ್ಯವಾಗುವಲ್ಲಿ ಬೇರೆ ಮಾತಿಲ್ಲ. ದೇಶ ಪ್ರೇಮದಿಂದ ತಾಯಿ ನಾಡಿನ ಕಲ್ಪನೆ ನಿಮ್ಮ ಮನದಲ್ಲೂ ಬಂದು,ಆಕೆಯನ್ನು ಮುಕ್ತಿಗೊಳಿಸಲು ದಾರಿ ತೋರುತ್ತದಲ್ಲಾ? ಹಾಗಾದರೆ ಯುವಕರೇ ಯುವ ಶಕಿಗಳೇ ನಮ್ಮೊಂದಿಗೆ ನಿಮ್ಮ ಕೈ ಸೇರಿಸಿ. ಸತ್ಯೆ ನಿಮ್ಮ ಮಂತ್ರ, ಶಾಂತಿ ನಿಮ್ಮ ಅಸವಾಗಿರಿಸಿ ಹೋರಾಡಲು ಮುಂದಾಗಿ, ಆಗ ನಮೆಗೆ ಜಯ ದೊರೆಯುತ್ತದೆ.

## ವಿದೇಶ ಪ್ರಯಾಣ

ಉಡುಪಿಯ ಕುಂಜಿಬೆಟ್ಟಿನಲ್ಲಿ ವಾಸವಾಗಿರುವ ಶ್ರೀಮತಿ ಉಷಾ. ಎಲ್. ಶ್ಯಾನುಭೋಗ್‌ರವರು ಲಂಡನಿನಲ್ಲಿ ಉದ್ಯೋಗದಲ್ಲಿರುವ ಅಳಿಯ ಕಾರ್ತಿಕ್ ಬಪ್ಪನಾಡು, ಮಗಳು ಅಶ್ವಿನಿ, ಮೊಮ್ಮಗ ಪ್ರಣವ್‌ರವರಲ್ಲಿಗೆ ಯುರೋಪ್ ದೇಶಗಳ ಪ್ರವಾಸಕ್ಕಾಗಿ ದಿನಾಂಕ-24-03-2013 ರಂದು ಲಂಡನಿಗೆ ತೆರಳಲಿದ್ದಾರೆ. ಮಹಿಳಾವೇದಿಕೆಯ ನಿಕಟಪೂರ್ವ ಅಧ್ಯಕ್ಷರಾದ ಇವರ ಪ್ರಯಾಣಕ್ಕೆ ಶ್ರೀಶಾರದಾ ಬಳಗದ ಶುಭಾಶಯಗಳು.

## ಪತಂಜಲಿ ಯೋಗ ಶಿಬಿರ

ತಾ.03-03-2013ರಿಂದ ತಾ.10-03-2013ರ ವರೆಗೆ ಉಡುಪಿ ಕುಂಜಿಬೆಟ್ಟು ಶ್ರೀಶಾರದಾ ಮಂಟಪದಲ್ಲಿ ಪತಂಜಲಿ ಯೋಗಪೀಠ ಹರಿದ್ವಾರ ಮತ್ತು ಶಾರದಾ ಮಂಟಪದ ವತಿಯಿಂದ ಸಂಘದ ಉಪಾಧ್ಯಕ್ಷರೂ, ಯೋಗ ಗುರುಗಳೂ ಆದ ಎಮ್.ಸದಾನಂದ ರಾವ್, ಸಂಘದ ಅಧ್ಯಕ್ಷ ಯು. ಪ್ರಫುಲ್ಲಚಂದ್ರರಾವ್, ಆಡಳಿತ ಮಂಡಳಿ ಸದಸ್ಯ ಪ್ರಕಾಶ್ ರಾವ್ ಕೋಲ್ಪೆ ಮತ್ತಿತರರು ತಾ.03-03-2013ರ ಪೂರ್ವಾಹ್ನ 5-30ಕ್ಕೆ ದೀಪ ಬೆಳಗಿಸಿ ಉದ್ಘಾಟಿಸಿದರು. ಕಾರ್ಯದರ್ಶಿ ಅರವಿಂದ ಕುಮಾರ್, ಅಜಿತ್ ರಾವ್ ಮತ್ತಿತರರು ಉಪಸ್ಥಿತರಿದ್ದರು.

ಸಮಾರೋಪ ಸಮಾರಂಭವು ತಾ.10-03-2013ರಂದು ಶಿಬಿರಾರ್ಥಿಗಳ ಉತ್ತಮ ಸಲಹೆಯೊಂದಿಗೆ ಮುಕ್ತಾಯಗೊಂಡಿತು. ಸುತ್ತಲಿನ ಹೆಚ್ಚಿನ ಜನರು ಶಿಬಿರದ ಪ್ರಯೋಜನವನ್ನು ಪಡೆದರು.

## ಮಾಂಗಲ್ಯಂ ತಂತುನಾನೇನ ....

ಕೀರ್ತಿಶೇಷ ಬಪ್ಪನಾಡು ಪಂ| ವಾಸು ದೇವಯ್ಯನವರ ಪೌತ್ರ ಶ್ರೀಮತಿ ಸುಮತಿ ಮತ್ತು ಡಾ| ಬಿ.ಎಚ್. ರಾಘವ ರಾಯರ ಸುಪುತ್ರ **ರಾಮ್ ಕಿಶನ್** ಹಾಗೂ ಕೀರ್ತಿಶೇಷ ಅಡೂರು ಬಳಕಿಲ ವೆಂಕಟರಾವ್‌ರವರ ಪೌತ್ರಿ ಶ್ರೀಮತಿ ಸಾವಿತ್ರಿ ಮತ್ತು ಶ್ರೀ ಅರವಿಂದ ರಾವ್‌ರವರ ಪುತ್ರಿ **ನಾಗಶ್ರೀ** ಇವರ ವಿವಾಹವು ತಾ.14-02-2013 ರಂದು ಉಡುಪಿಯ ಗೋವಿಂದಕಲ್ಯಾಣ ಮಂಟಪದಲ್ಲಿ ನೆರವೇರಿತು.

## ಗೃಹಪ್ರವೇಶ


ಶ್ರೀಮತಿ ಆಶಾ ಮತ್ತು ಶ್ರೀ ಅಶ್ವಿನಿಕುಮಾರ್ ಇವರು ಉಡುಪಿ ಚಿಟ್ಪಾಡಿಯಲ್ಲಿ ನೂತನವಾಗಿ ನಿರ್ಮಿಸಿದ ಗೃಹ ''ಅಶ್ವೀಜ'' ಇದರ ಪ್ರವೇಶೋತ್ಸವವನ್ನು ತಾ.20-02-2013ರಂದು ನೆರವೇರಿಸಿದರು.

★★★ ★★★

ಶ್ರೀಮತಿ ರಾಜೇಶ್ವರಿ ಮತ್ತು ಶ್ರೀ ಜನಾರ್ದನ ರಾವ್‌ರವರು ನಂದಳಿಕೆಯಲ್ಲಿ ನವೀಕೃತ ಮನೆ ''ಶ್ರೀ ಶ್ಯಾಮಧಾಮ''ದ ಪ್ರವೇಶೋತ್ಸವವನ್ನು ತಾ.15-02-2013ರಂದು ನೆರವೇರಿಸಿದರು. ಮರುದಿನ ತಾ.16-02-2013ರಂದು ಜನಾರ್ದನ ರಾವ್‌ರ ತಾಯಿ ಶ್ರೀಮತಿ ಶಾಂತಾ ಎಸ್.ರಾವ್ ರವರ ಸಪ್ತತಿ ಸಮಾರಂಭ ಚಂಡಿಕಾ ಯಾಗ ನೆರವೇರಿಸಿದರು.

## ವೈವಾಹಿಕ ಬೆಳ್ಳಿಹಬ್ಬ

ಶ್ರೀಮತಿ ರಾಜೇಶ್ವರಿ ಮತ್ತು ಶ್ರೀ ಜನಾರ್ದನ ರಾಯರ ದಾಂಪತ್ಯ ಜೀವನದ ಬೆಳ್ಳಿ ಹಬ್ಬ ಪ್ರಯುಕ್ತ ತಾ.16-12-2013ರಂದು ಶ್ರೀ ಸತ್ಯನಾರಾಯಣ ಪೂಜೆ ಜರಗಿತು.



## ಉಪನಯನ

**ಚಿ| ನಾಗರಾಜ**

ಶ್ರೀಮತಿ ಪದ್ಮ ಮತ್ತು ಕೆ. ನಾಗೇಶ ಶ್ಯಾನುಭಾಗ್ ಕಿರಿಮಂಜೇಶ್ವರ ಇವರ ಪುತ್ರ ಚಿ| ನಾಗರಾಜನ ಬ್ರಹ್ಮೋಪದೇಶವು ತಾ.14-2-2013 ರಂದು ಹಟ್ಟಿಯಂಗಡಿ ಶ್ರೀ ಮಾರಲಾದೇವಿ ದೇವಸ್ಥಾನದಲ್ಲಿ ಜರಗಿತು.

★★★ ★★★

**ಚಿ| ಶಶಾಂಕ**

ಕೀರ್ತಿಶೇಷ ಪೆರ್ಣಂಕಿಲ ವಾಸುದೇವ ರಾಯರ ಪೌತ್ರ, ಶ್ರೀಮತಿ ಶಕುಂತಳಾ ಮತ್ತು ಶ್ರೀ ನಿರಂಜನರಾಯರ ದ್ವಿತೀಯ ಪುತ್ರ ಚಿ| ಶಶಾಂಕನ ಬ್ರಹ್ಮೋಪದೇಶವು ತಾ.20-2-13 ರಂದು ಪೆರ್ಣಂಕಿಲದಲ್ಲಿರುವ ಸ್ವಗೃಹ ಶಾಂತಿನಿವಾಸದಲ್ಲಿ ಜರಗಿತು.

## ಮೀನ ಮಾಸದ ವಿಶೇಷ ದಿನಗಳು

| | |
|---|---|
| 14-03-2013 | ಮೀನ ಸಂಕ್ರಮಣ |
| 17-03-2013 | ಉತ್ತರಾಭಾದ್ರಾ ನಕ್ಷತ್ರಾರಂಭ |
| 23-03-2013 | ಸರ್ವೇಕಾದಶೀ |
| 27-03-2013 | ಪೂರ್ಣಿಮಾ |
| 30-03-2013 | ಸಂಕಷ್ಠ ಚತುರ್ಥಿ ಚಂದ್ರೋದಯ ರಾತ್ರಿ 9.41ಕ್ಕೆ |
| 31-03-2013 | ರೇವತೀ ನಕ್ಷತ್ರಾರಂಭ |
| 06-04-2013 | ಸರ್ವೇಕಾದಶೀ |
| 10-04-2013 | ಅಮವಾಸ್ಯಾ |
| 11-04-2013 | ಚಾಂದ್ರ ಯುಗಾದಿ |
| 13-04-2013 | ಮೇಷ ಸಂಕ್ರಮಣ, ಅಶ್ವಿನೀ ನಕ್ಷತ್ರಾರಂಭ |

## ಕು| ಎಸ್. ಶೃತಿರಾವ್



ಕುಮಾರಿ ಎಸ್.ಶೃತಿ ರಾವ್ ಇವರು ಖೋ ಖೋ ಪಂದ್ಯಾಟ ಮತ್ತು ಅತ್ಲೆಟಿಕ್ 200 ಮೀ. ಓಟ, 400 ಮೀ ರಿಲೆಯಲ್ಲಿ ಭಾಗವಹಿಸಿ ಸತತ 3 ವರ್ಷಗಳಿಂದ ರಾಜ್ಯ ಮಟ್ಟಕ್ಕೆ ಆಯ್ಕೆ ಆಗಿದ್ದಾರೆ. ಸರಕಾರಿ ಪದವಿ ಪೂರ್ವ ಕಾಲೇಜು ಬ್ರಹ್ಮಾವರ ಇಲ್ಲಿ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಇವರು ಸಾಸಾನದ ಶಿವರಾಮ ರಾವ್ ಮತ್ತು ಶಕುಂತಳಾ ಇವರ ಪುತ್ರಿ. ಈಕೆಯ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

## ಕು| ಶರಣ್ಯ ನೆಲ್ಲಿಕುಂಜೆ



2012ನೇ ಇಸವಿ ಅಕ್ಟೋಬರ್ ತಿಂಗಳಿನಲ್ಲಿ ಮಂಗಳೂರಿನಲ್ಲಿ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯಿಂದ ನಡೆಸಲ್ಪಟ್ಟ ಕರ್ನಾಟಕ ಸಂಗೀತ ಜ್ಯೂನಿಯರ್ ಗ್ರೇಡ್ ಹಾಡುಗಾರಿಕೆ ಪರೀಕ್ಷೆಯಲ್ಲಿ ಕುಮಾರಿ ಶರಣ್ಯ ನೆಲ್ಲಿಕುಂಜೆ ಇವರು 395 (98.75%) ಅಂಕಗಳನ್ನು ಪಡೆದು ಪ್ರಥಮ ದರ್ಜೆಯಲ್ಲಿ ಉತ್ತೀರ್ಣಳಾಗಿರುತ್ತಾರೆ. ಪ್ರಾರಂಭದ ಒಂದು ವರ್ಷ ಉಷಾ ಭಟ್ ಮಜೆಕ್ಕಾರ್ ಇವರಲ್ಲಿ ಸಂಗೀತ ಶಿಕ್ಷಣವನ್ನು ಪೂರೈಸಿ ಪ್ರಸ್ತುತ ಬಳ್ಳಪದವು ಯೋಗೀಶ್ ಶರ್ಮರವರು ನಡೆಸುತ್ತಿರುವ 'ವೀಣಾವಾದಿನಿ' ಪೆರ್ಲ ಸಂಗೀತ ಶಾಲೆಯಲ್ಲಿ ಶಿಕ್ಷಣವನ್ನು ಮುಂದುವರಿಸಿದ್ದಾರೆ. ಪೆರ್ಲ ಸತ್ಯನಾರಾಯಣ ಪ್ರೌಢ ಶಾಲೆಯ 9ನೇ ತರಗತಿಯಲ್ಲಿ ಕಲಿಯುತ್ತಿರುವ ಶರಣ್ಯ ಶಾಲೆಯಲ್ಲಿ ನಡೆಯುವ ಜಿಲ್ಲಾಮಟ್ಟದ ಹಾಡುಗಾರಿಕೆ ಸ್ಪರ್ಧೆ, ಭಾವಗೀತೆ ಸ್ಪರ್ಧೆ ಮತ್ತು ಜನಪದ ಹಾಡುಗಳ ಸ್ಪರ್ಧೆಗಳಲ್ಲೂ ಭಾಗವಹಿಸಿ ಅನೇಕ ಪ್ರಶಸ್ತಿಗಳನ್ನು ಪಡೆದುಕೊಂಡಿರುತ್ತಾರೆ. ಇವರು ನೆಲ್ಲಿಕುಂಜೆ ಶರತ್‌ಕುಮಾರ್ ಮತ್ತು ಸುಕನ್ಯಾ ದಂಪತಿಗಳ ಪುತ್ರಿಯೂ, ಸುಬ್ಬರಾವ್ ಮತ್ತು ಸರಳಾದೇವಿಯವರ ಪೌತ್ರಿಯೂ ಆಗಿರುತ್ತಾರೆ. ಈಕೆಯ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.




ಶ್ರೀಮತಿ ಮತ್ತು ಶ್ರೀ ಗಣೇಶ್ ಹೆಬ್ಬಾರ್ ದಂಪತಿಗಳಿಂದ ಬಾಳೆಕುದ್ರು ನೃಸಿಂಹಾಶ್ರಮ ಶ್ರೀಗಳಿಗೆ ಹಾಗೂ ಪೇಜಾವರ ಕಿರಿಯ ಸ್ವಾಮೀಜಿಯವರಿಗೆ ತಮ್ಮ ಮಗ ಯಾಜ್ಞವಲ್ಕ್ಯನ ಬ್ರಹ್ಮೋಪದೇಶ ಪ್ರಯುಕ್ತ ತಾ.18-2-2013ರಂದು ತಮ್ಮ ಮನೆಯಲ್ಲಿ ಪಾದಪೂಜೆ ನೆರವೇರಿಸಿದರು. ಸಂಜೆ ಸುಧೀರ್‌ರಾವ್ ಕೊಡವೂರು ಬಳಗದಿಂದ ಸುಗಮಸಂಗೀತ ಜರಗಿತು. ನಂತರ ಆಗಮಿಸಿದವರಿಗೆ ಉಪಹಾರ ವ್ಯವಸ್ಥೆ ಮಾಡಲಾಯಿತು.

## ದ್ವೇಷಜ್ವಾಲೆ

ದ್ವೇಷ ಜ್ವಾಲೆಯು ಹೊಮ್ಮಿ ನರನೆದೆಯ ಸುಡುತಲಿದೆ
ಪ್ರೀತಿ ಸಮರಸದ ಬಂಧನವಿಂದು ಸುಡಲ್ತೊಡಗುತಿದೆ
ಮನುಜ ಮನುಜನನೇ ತಿನುವ ಕಾಲವೊಂದಿಹುದೊ
ಸತ್ಯಧರ್ಮಗಳವನತಿಗೆ ಜಗವಿಂದು ಕಾಯುತಿಹುದೊ
ಮೂರು ದಿನದಾ ಬಾಳು, ಕೂಳ ಗೋಳು
ಪಾಳು ಭುವಿಗೆಬ್ಬಿಸಿದ ಧೂಳು, ಮನೆಯೇ ಹಾಳು
ರಾಷ್ಟ್ರ-ರಾಷ್ಟ್ರಗಳ ನಡುವೆ ಮೇಲಾಟ, ತಂದಿದೆ ಕಾದಾಟ
ಹೆಣ್ಣು, ಹೊನ್ನು, ಮಣ್ಣಿಗೆ ಪರದಾಟ, ಮನುಕುಲಕೆ ಬರಿಕಾಟ
ಕಾಲವು ಗತಿಸಲು ಸುಖವದು ಬರಿನೋಟ
ತಿಳಿ ಮನುಜ, ವೇಳೆ ಮಿಂಚೆ ಚಿಂತೆಯ ಮಾಟ
ಸಕಲ ಧರ್ಮದ ಸಾರ ತತ್ತ್ವವದೊಂದೆ
ದೇವನೊಬ್ಬ ನಾಮ ಹಲವು ತಿಳಿದು ಸಾಗು ಮುಂದೆ

**-ಸಂತೋಷ್ ರಾವ್, ಮಸ್ಕಿಬೈಲು, ಬಾರ್ಕೂರು**

## ವಿಳಾಸ ಬದಲಾವಣೆ

**SUJATHA M. RAO**
Door No.2-173(4), "Sri Devi Krupa"
Kalyana Nagar, Kukkikatte,
Udupi-576 101.

**ವೈ. ಉಮೇಶ ರಾವ್**, ME, MIE
1056, ''ಸಂಜೀವಿನಿ'', ಕ್ಲಾಸಿಕ್ ಆರ್ಚರ್ಡ್ಸ್, ಫೇಸ್ 2,
ಮೀನಾಕ್ಷಿ ದೇವಸ್ಥಾನದ ಹಿಂಬದಿ, ಬನ್ನೇರುಘಟ್ಟ ರೋಡ್, ಬೆಂಗಳೂರು-560076.
ದೂರವಾಣಿ : 080-26486027 ಮೊಬೈಲ್ : 9945278119

## ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ



ಡಾ| ವೈ. ಸುದರ್ಶನ ರಾವ್

**ಪ್ರಶ್ನೆ:** ಫಿಶರ್ (FISSURE) ಎಂದರೇನು ? ಈ ಖಾಯಿಲೆ ಬರಲು ಕಾರಣವೇನು ? ಇದರ ಚಿಕಿತ್ಸೆ ಹೇಗೆ?

ಉತ್ತರ: ಇದು ಗುದದ್ವಾರವನ್ನು ಕಾಡುವ ಮೂಲವ್ಯಾಧಿಗಳಲ್ಲೊಂದು ಖಾಯಿಲೆ. ಈ ತೊಂದರೆಯು ಆರಂಭವಾಗುವಾಗ ಗುದದ್ವಾರದ ಬಾಯಿಯಲ್ಲಿ ಒಂದು ಸಪೂರವಾದ ಹಾಗೂ ಸುಮಾರು ಒಂದು ಸೆಂಟೀಮೀಟರ್ ಉದ್ದದ ಒಂದು ಸೀಳು ಇರುತ್ತದೆ. ಆದರೆ ಈ ಗಾಯವು ಮಲವಿಸರ್ಜನೆಯ ಸಂದರ್ಭದಲ್ಲಿ ಪ್ರತೀದಿನವೂ ಪುನಹಾ ಸೀಳುವುದರಿಂದ ಉಳಿದ ಗಾಯಗಳಂತೆ ಸುಲಭದಲ್ಲಿ ಗುಣವಾಗುವುದಿಲ್ಲ. ಕೆಲವೊಮ್ಮೆ ಈ ಗಾಯವು ವರ್ಷಗಟ್ಟಲೆ ಹಾಗೆಯೇ ಇರುವುದುಂಟು. ಹೀಗೆ ಸುಮಾರು ಸಮಯದಿಂದ ಮಲದ್ವಾರದಲ್ಲಿ ಗಾಯವಾಗಿ ಹಾಗೆಯೆ ಉಳಿಯುವುದರಿಂದಾಗಿ ಆ ಗಾಯ (ಸೀಳು)ದ ಸುತ್ತಲೂ ಚರ್ಮವು ಗಟ್ಟಿಯಾಗಿ/ ಬಾತುಕೊಂಡು ದಪ್ಪನೆಯ ದೊರಗಾದ ಉದ್ದದ ಚರ್ಮದ ಮುಂಚಾಚೊಂದು ಮಲದ್ವಾರದಿಂದ ಹೊರಗೆ ಬರುತ್ತದೆ. ಸೀಳುಗಳ ಸಂಖ್ಯೆಯನ್ನು ಹೊಂದಿಕೊಂಡು ಈ ತರಹದ ಒಂದು ಅಥವಾ ಎರಡು ಮುಂಚಾಚುಗಳಿರಬಹುದು. ಈ ಖಾಯಿಲೆಯನ್ನು ಫಿಶರ್ ಎಂದು ಕರೆಯುತ್ತೇವೆ.

ಮಲವಿಸರ್ಜನೆ ದಿನಂಪ್ರತಿ ಸರಿಯಾಗಿ ಆಗದೆ ಗಟ್ಟಿಯಾದ ಮಲವನ್ನು ಬಿಕ್ಕಿ ಹೊರಗೆ ಹಾಕುವಾಗ ಆದ ಗಾಯವೇ ಗುಣವಾಗದೆ ಮುಂದೆ ಫಿಶರ್ ಖಾಯಿಲೆಯಾಗುವುದು ಹೆಚ್ಚಿನ ಕೇಸುಗಳಿಗೆ ಸಾಮಾನ್ಯ ಕಾರಣ. ಇದಲ್ಲದೆ ಗುದದ್ವಾರದಲ್ಲಿ ಕಜ್ಜಿ, ತುರಿಕೆ, ಹುಳಬಾಧೆ, ಅತಿಸಾರ (ಭೇದಿ), ಕರುಳಿನ ಉರಿಯೂತದ ಖಾಯಿಲೆ (CROHN'S DISEASE) ಹೀಗೆ ಅನೇಕ ಕಾರಣಗಳಿಂದ ಗುದದ್ವಾರದಲ್ಲಿ ಗಾಯಗಳಾಗಬಹುದು.

ಸಣ್ಣ ಮಕ್ಕಳಲ್ಲಿ ಮೇಲೆ ಹೇಳಿದ ಯಾವುದಾದರೊಂದು ಕಾರಣಕ್ಕೆ ಮಲದ್ವಾರದಲ್ಲಿ ಸೀಳುಗಳಾಗುತ್ತದೆ. ಗರ್ಭಿಣಿಯರಲ್ಲಿ ಹಾಗೂ ಬಾಣಂತಿಯರಲ್ಲೂ ಫಿಶರ್ ಖಾಯಿಲೆ ಸಾಮಾನ್ಯ.

ನೋವು ಈ ಕಾಯಿಲೆಯ ಪ್ರಮುಖ ಚಿಹ್ನೆ. ಮಲವಿಸರ್ಜನೆಯ ಸಂದರ್ಭದಲ್ಲಿ ಹಾಗೂ ನಂತರ ಸುಮಾರು ಹೊತ್ತು ಮಲದ್ವಾರದಲ್ಲಿ ನೋವು ಇರುತ್ತದೆ. ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ಮಲವಿಸರ್ಜನೆಯ ಸಮಯಬಿಟ್ಟು ಬೇರೆ ಸಮಯದಲ್ಲಿ ನೋವಿರುವುದಿಲ್ಲ. ಈ ನೋವಿನಿಂದಾಗಿ ಮಲವಿಸರ್ಜಿಸುವುದು ದೊಡ್ಡ ರಗಳೆ ಕೆಲಸವಾಗಿ ಬಿಡುತ್ತದೆ. ಕೆಲವೊಮ್ಮೆ ಸ್ವಲ್ಪ ರಕ್ತವೂ ಮಲದೊಂದಿಗೆ ಹೋಗಬಹುದು. ಇನ್ನು ಕೆಲವೊಮ್ಮೆ ಈ ಸೀಳಿನಲ್ಲಿ ಕೀವಾಗಿ ನೋವು ವಿಪರೀತವಾಗಬಹುದು ಹಾಗೂ ಜ್ವರ ಬರಬಹುದು.

ಆಹಾರದಲ್ಲಿ ಸಾಕಷ್ಟು ಸೊಪ್ಪು ತರಕಾರಿ ಹಾಗೂ ಹಣ್ಣುಹಂಪಲುಗಳ ಬಳಕೆಯಿಂದ ಈ ಖಾಯಿಲೆಯನ್ನು ತಡೆಗಟ್ಟಬಹುದು ಹಾಗೂ ಗುಣಪಡಿಸಿ ಕೊಳ್ಳಬಹುದು. ಧೂಮಪಾನ, ಮದ್ಯಪಾನ, ಮಾಂಸಾಹಾರ ಹಾಗೂ ಫಾಸ್ಟು ಫುಡ್‌ಗಳ ಅತಿಯಾದ ಸೇವನೆಯಿಂದಾಗುವ ಮಲಬದ್ಧತೆಯಿಂದ ಈ ಖಾಯಿಲೆ ಇನ್ನಷ್ಟು ಉಲ್ಬಣಿಸುತ್ತದೆ ಇನ್ನು ಈಗಾಗಲೆ ಇರುವ ಖಾಯಿಲೆಗಳಿಗೆ ತೆಗೆದುಕೊಳ್ಳುವ ಕೆಲವು ಔಷಧಿಗಳು ಮಲಬದ್ಧತೆ ಉಂಟು ಮಾಡುವುದರಿಂದ ಅವರಿಗೂ ಈ ಫಿಶರ್ ಖಾಯಿಲ'ತೊಂದರೆ ಕೊಡಬಹುದು. ಇಂತಹವರಿಗೆ ಆಹಾರದ ಪಥ್ಯದೊಂದಿಗೆ ಮಲವು ಗಟ್ಟಿಯಾಗಿರದೆ ಮೆತ್ತಗಿರುವಂತೆ ಮಾಡುವ (STOOL SOFTNERS) ಔಷಧ ಹಾಗೂ ಮಲದ್ವಾರಕ್ಕೆ ಹಚ್ಚುವ ಔಷಧಿಗಳಿಂದ ಉಪಶಮನ ಸಿಗುತ್ತದೆ.

ಆಹಾರ ಹಾಗೂ ಔಷಧಗಳಿಂದಲೂ ಗುಣವಾಗದಿದ್ದರೆ ಅಥವಾ ಒಮ್ಮೆ ಗುಣವಾಗಿ ಪುನಃಪುನಃ ಮರುಕಳಿಸುತ್ತಿದ್ದರೆ, ಗುದದ್ವಾರದ ಹೊರಗೆ ಚರ್ಮದ ಮುಂಚಾಚು ಇದ್ದರೆ ಅಂತಹಾ ರೋಗಿಗಳಿಗೆ ಶಸ್ತ್ರಚಿಕಿತ್ಸೆ ಬೇಕಾಗುತ್ತದೆ. ಇದೊಂದು ಸರಳ ಶಸ್ತ್ರಚಿಕಿತ್ಸೆಯಾಗಿದ್ದು ಈ ಚಿಕಿತ್ಸೆಯಿಂದ ಈ ಖಾಯಿಲೆ ಸಂಪೂರ್ಣವಾಗಿ ಗುಣವಾಗುತ್ತದಲ್ಲದೆ ಪುನಹ ಮರುಕಳಿಸುವುದಿಲ್ಲ.

ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 9845136322

# ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ಮಾಹಿತಿ ಶಿಬಿರ



ಪರಿಶ್ರಮ ಹಾಗೂ ಶ್ರದ್ಧೆಯಿಂದ ಪರೀಕ್ಷೆಯಲ್ಲಿ ಉತ್ತಮ ಅಂಕಗಳಿಸಲು ಸಾಧ್ಯವೆಂದು, ಶ್ರೀ ಹರಿಪ್ರಸಾದ, ಪ್ರಾಂಶುಪಾಲರು, ಮಹೇಶ್ ಪಿ.ಯು. ಕಾಲೇಜು ಉಡುಪಿ, ಇವರು ಇತ್ತೀಚಿಗೆ ಶಾರದಾ ಮಂಟಪದಲ್ಲಿ ಜರಗಿದ ಹತ್ತನೇ ವರ್ಷದ ಪರೀಕ್ಷಾ ತಯಾರಿ ಶಿಬಿರವನ್ನು ಉದ್ಘಾಟಿಸಿ, ಉದ್ಘಾಟನಾ ಮಾತುಗಳೊಂದಿಗೆ ಶಿಬಿರಾರ್ಥಿಗಳಿಗೆ ಶುಭ ಕೋರಿದರು. ಬೆಳಗಿನ ಉದ್ಘಾಟನಾ ಸಮಾರಂಭದಲ್ಲಿ ಸ್ಥಾನಿಕ ಬ್ರಾಹ್ಮಣ ಸಂಘದ ಕಾರ್ಯದರ್ಶಿ ಶ್ರೀ ಅರವಿಂದ ಕುಮಾರ್ ಹಾಗೂ ಶಿಕ್ಷಣ ತರಬೇತಿ ವೇದಿಕೆಯ ಸದಸ್ಯರಾದ ಶ್ರೀಮತಿ ಬಿ. ನಿವೇದಿತಾ ಉಪಸ್ಥಿತರಿದ್ದರು. ಮೊದಲ ಅಧಿವೇಶನದಲ್ಲಿ ಪರೀಕ್ಷಾ ತಯಾರಿಯ ಕುರಿತು ಶ್ರೀಮತಿ ಬಿ.ನಿವೇದಿತಾ ಶಿಬಿರಾರ್ಥಿಗಳೊಂದಿಗೆ ವಿಚಾರ ವಿನಿಮಯ ನಡೆಸಿದರು. ತದನಂತರ ಮಣಿಪಾಲ ಪದವಿಪೂರ್ವ ಕಾಲೇಜಿನ ನಿವೃತ್ತ ಉಪಪ್ರಾಂಶುಪಾಲರಾದ ಶ್ರೀ ನಿರಂಜನ ರಾವ್ ಗಣಿತ ವಿಷಯದ ಕುರಿತು ವಿವರವಾದ ಮಾಹಿತಿ ನೀಡಿದರು. ಅಪರಾಹ್ನದ ಅಧಿವೇಶನದಲ್ಲಿ ಹಂಗಾರಕಟ್ಟೆ ಚೇತನಾ ಪ್ರೌಢಶಾಲೆ ಶಿಕ್ಷಕರಾದ ಶ್ರೀ ಗೋವಿಂದ ರಾವ್ ರಸಾಯನ ಶಾಸ್ತ್ರದ ಪ್ರಮುಖ ವಿಷಯಗಳನ್ನು ತಿಳಿಸಿದರು. ನಂತರದ ಅಧಿವೇಶನದಲ್ಲಿ ಶಿಕ್ಷಣ ವೇದಿಕೆ ಸಂಚಾಲಕರಾದ ಶ್ರೀ ಪಿ.ಪ್ರಭಾಕರ ಭಂಡಿ ಜೀವಶಾಸ್ತ್ರದ ಚಿತ್ರ ಹಾಗೂ ಪ್ರಮುಖ ಪ್ರಶ್ನೆಗಳ ಕುರಿತು ಚರ್ಚಿಸಿದರು. ತದನಂತರ ಮುನಿಯಾಲು ಸರಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರಾದ ಶ್ರೀ ಕೇಶವ ಆಚಾರ್ಯ ಭೌತಶಾಸ್ತ್ರದ ಅನ್ವಯ ಮಾದರಿಯ ಪ್ರಶ್ನೆಗಳ ಮಾಹಿತಿ ನೀಡಿದರು. ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಶಿಕ್ಷಣ ಮತ್ತು ತರಬೇತಿ ವೇದಿಕೆಯ ಅಧ್ಯಕ್ಷರಾದ ಡಾ। ವೈ.ರವೀಂದ್ರನಾಥ್ ರಾವ್ ಸಮಾರೋಪ ನುಡಿಗಳೊಂದಿಗೆ ಪರೀಕ್ಷೆಯಲ್ಲಿ ಯಶಸ್ವಿಯಾಗುವಂತೆ ಹಾರೈಸಿದರು. ಸ್ಥಾನಿಕ ಬ್ರಾಹ್ಮಣ ಸಂಘದ ಖಜಾಂಚಿ ಶ್ರೀ ಕೃಷ್ಣಮೂರ್ತಿ ರಾವ್ ಹಾಗೂ ಕಾರ್ಯದರ್ಶಿ ಶ್ರೀ ಅರವಿಂದ ಕುಮಾರ್ ಉಪಸ್ಥಿತರಿದ್ದರು. ಎಲ್ಲಾ ಶಿಬಿರಾರ್ಥಿಗಳಿಗೆ ಡಾ। ವೈ.ಸುದರ್ಶನ್ ರಾವ್ ಶಿಕ್ಷಣ ಮಾರ್ಗದರ್ಶನದ ಕಿರು ಹೊತ್ತಗೆ ನೀಡಿದರು. ಸಂಘದ ಜತೆ ಕಾರ್ಯದರ್ಶಿ ಮಂಜುನಾಥ ಹೆಬ್ಬಾರ್, ನಿರ್ದೇಶಕ ಪ್ರಕಾಶ್ ರಾವ್ ಕೋಲ್ಪೆ ಮತ್ತು ಶಾರದಾ ಮಂಟಪದ ಮೆನೇಜರ್ ಅಜಿತ್ ರಾವ್ ಕಾರ್ಯಕ್ರಮದ ಸಂಘಟನೆ ಮತ್ತು ನಿರ್ವಹಣೆಯಲ್ಲಿ ಸಹಕರಿಸಿದರು. ಶಿಬಿರವನ್ನು ಸಂಘಟಿಸಲು ಡಾ। ವೈ. ರವೀಂದ್ರನಾಥ ರಾವ್, ಶ್ರೀ ಪ್ರಭಾಕರ ಭಂಡಿ ಹಾಗೂ ಸ್ಥಾನಿಕ ಬ್ರಾಹ್ಮಣ ಸಂಘದ ಕಾರ್ಯದರ್ಶಿ ಶ್ರೀ ಅರವಿಂದ ಕುಮಾರ್, ಖಜಾಂಚಿ ಶ್ರೀ ಕೃಷ್ಣಮೂರ್ತಿ ರಾವ್ ಹಾಗೂ ಪದಾಧಿಕಾರಿಗಳು ಸಲಹೆ ಸೂಚನೆ ನೀಡಿ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದರು.


-ಪ್ರಭಾಕರ ಭಂಡಿ

**ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ದೇವಸ್ಥಾನದಲ್ಲಿ ಸಂಭ್ರಮದ ಮಹಾಶಿವರಾತ್ರಿ ಆಚರಣೆ** (...1ನೇ ಪುಟದಿಂದ)

ಸೃಷ್ಟಿ ಕಲಾವಿದರ ತಂಡದ ವಿದುಷಿ ಡಾ। ಮಂಜರಿಚಂದ್ರ ಇವರನ್ನು ಸಂಘದ ನಿಕಟ ಪೂರ್ವಾಧ್ಯಕ್ಷರೂ, ಮಂಗಳೂರು ಸುಬ್ರಹ್ಮಣ್ಯ ಸಭೆಯ ಅಧ್ಯಕ್ಷರೂ ಆದ ಶ್ರೀ ಸಿ.ಎಸ್. ರಾಯರು ಮತ್ತು ನಮ್ಮ ಸಂಘದ ಕಾರ್ಯದರ್ಶಿಯು. ಅರವಿಂದ ಕುಮಾರ್ ಇವರು ಫಲ ಪುಷ್ಪ ಹಾಗೂ ಪ್ರಸಾದ ನೀಡಿ ಗೌರವಿಸಿದರು. ಈ ಕಾರ್ಯಕ್ರಮಕ್ಕೆ ಪ್ರಾಯೋಜಕರಾಗಿ ನಮ್ಮೊಂದಿಗೆ ಗಣೇಶ ಹೆಬ್ಬಾರ್ ಸಹಕರಿಸಿದರು. ಯುವವೇದಿಕೆಯ ಸಂಚಾಲಕರಾದ ವಿಶ್ವನಾಥ ಶ್ಯಾನುಭಾಗ್ ಮತ್ತು ಸದಸ್ಯರು, ಕಲಾವೇದಿಕೆಯ ಸಂಚಾಲಕರಾದ ಪ್ರಕಾಶ್‌ರಾವ್ ಕೋಲ್ಪೆ ಹಾಗೂ ಮಹಿಳಾವೇದಿಕೆಯ ಸದಸ್ಯರು ಮತ್ತು ಇತರರು ಈ ಕಾರ್ಯಕ್ರಮದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಇವರೆಲ್ಲರಿಗೂ ಸಂಘವು ಆಭಾರಿ ಯಾಗಿದೆ.

ಆ ದಿನ ಸಂಜೆ ಉಡುಪಿಯ ಸೃಷ್ಟಿ ನೃತ್ಯ ಕಲಾಕುಟೀರ (ರಿ.) ಇವರಿಂದ 1) ಪುಷ್ಪಾಂಜಲಿ -ಗಣೇಶ ಜನನ 2) ಆನಂದ ತಾಂಡವ 3) ಸರಸ್ವತಿ ಸ್ತುತಿ 4) ದುರ್ಗೆ ದುರ್ಗೆ 5) ಚಲಿಯೇ ಕಂಜನಮೋ 6) ಶಿವಪಂಚಾಕ್ಷರಿ 7) ಅರ್ಧನಾರೀಶ್ವರ ನೃತ್ಯ ರೂಪಕ ಕಾರ್ಯಕ್ರಮ ನಡೆದವು. ಇದರಲ್ಲಿ ಡಾ। ವಿದುಷಿ ಮಂಜರಿಚಂದ್ರ, ವಿದುಷಿ ಅಕ್ಷತಾ, ಸುಶ್ಮಿತ, ಸುಮನ ಎಮ್.ರಾವ್, ರಕ್ಷಾ ಯು., ಮೇದಿನಿ ಇವರುಗಳು ಕಲಾವಿದರಾಗಿ ಭಾಗವಹಿಸಿದರು.

ಪ್ರೊ : ಸುಧಾಕರ್ ರಾವ್ ಬೆಳ್ಳೆ



## ಶ್ರೀಮಾತಾ ಇಲೆಕ್ಟ್ರಾನಿಕ್ಸ್

ಎಲ್ಲಾ ರೀತಿಯ ಗೃಹೋಪಯೋಗಿ ವಸ್ತುಗಳಿಗಾಗಿ ಭೇಟಿ ನೀಡಿ....

ಪ್ರೀತಿ ಕಾಂಪ್ಲೆಕ್ಸ್, ಬೆಳ್ಮಣ್ಣು, ಉಡುಪಿ. ಫೋನ್ : 08258-274103
ಚೈತ್ರ ಕಾಂಪ್ಲೆಕ್ಸ್, ಪಡುಬಿದ್ರಿ ಗ್ರಾಮಪಂಚಾಯತ್‌ನ ಎದುರು. ಫೋನ್ : 0820-2599093

## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

**ಈ ತಿಂಗಳ ಕಾರ್ಯಕ್ರಮಗಳು**

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ

ಪ್ರತಿ ಸೋಮವಾರ: **"ಸತ್ಸಂಗದವರಿಂದ ಭಜನೆ"** ಸಂಜೆ 6-00 ಗಂಟೆಯಿಂದ

ಪ್ರತಿ ಮಂಗಳವಾರ: **"ಸೌಂದರ್ಯಲಹರಿ ಪಾರಾಯಣ"** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ **"ಪಾರಾಯಣ"** ಸಂಜೆ ಗಂಟೆ 4-30ರಿಂದ

**ಸಂಕಷ್ಟಹರ ಚತುರ್ಥಿಯಂದು (ತಾ.30-03-2013) "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.01-04-2013 ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ತಾ.02-04-2013 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)

**ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು, ಉಡುಪಿ**

ಪ್ರಿಯರೇ,

ಸ್ವಸ್ತಿ ಶ್ರೀ ಚಾಂದ್ರ ವಿಜಯ ನಾಮ ಸಂ।ರದ ಚೈತ್ರ ಶುಕ್ಲ ಮೀನ ಮಾಸ
ತಾ.11-04-2013ರಿಂದ ತಾ.19-04-2013ರ ವರೆಗೆ


**ಕಿರುನವರಾತ್ರಿ ಮಹೋತ್ಸವವು** ಜರಗಲಿರುವುದು.

ತಮಗೆಲ್ಲರಿಗೂ ಆದರದ ಸ್ವಾಗತ -ಕಾರ್ಯದರ್ಶಿ

**ಉದ್ಯೋಗ ಮಾಹಿತಿ :** ವಿವಿಧ ಕೇಂದ್ರ ಸರ್ಕಾರಿ ಉದ್ಯೋಗಗಳಿಗಾಗಿ ಅರ್ಹ ಅಭ್ಯರ್ಥಿಗಳಿಗೆ ಕರೆ ನೀಡಿದ್ದು, ವಿವರಗಳಿಗಾಗಿ ಈ ಕೆಳಗಿನ ವೆಬ್‌ಸೈಟನ್ನು ವೀಕ್ಷಿಸಬಹುದು.

**www.ssconline2.gov.in**

## ದೇವಿಕೃಪಾ ಏಜೆನ್ಸೀಸ್, ನಂದಿಕೂರು



ಫೋನ್ : 2556536 (R), 2555466 (O), Mobile : 9845149521

**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು



ಎಮ್. ದೇವಾನಂದ್ ಭಟ್ Cell : 9845644556
9483913344



## ಶೋಭಾ ಡಿಜಿಟಲ್

ಸ್ಟುಡಿಯೋ & ವೀಡಿಯೊ

ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು - 574 164 (0824)-2256374 (O) ಮಂಗಳೂರು, ದ.ಕ.

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು




Owned & Published by : U. Aravindakumar - Secretary Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Krishnakumar Rao Mattu, Designed @ SriNidhi Computer Graphics, Rajataadri, Manipal, Printed at Agrahara Offsets, Udupi. E-mail : srisharadaudupi@yahoo.co.in Website : www.srisharada.org